

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 102 Tuesday 24-12-2024 E-mail : maruti.b.hosamani76@gmail.com Page: 4 Price : Rs. 1/-


## "ಬದುಕು ಬಂಡಿ" ಚಲನಚಿತ್ರ ಬಿಡುಗಡೆ



**ಧಾರವಾಡ :** ಬಾಬಾ ಸಿನಿ ಕ್ರಿಯೇಷನ್ಸ್ ರವರ ಕರ್ನಾಟಕ ಸರಕಾರದ ಸುವರ್ಣ ಮಹೋತ್ಸವ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಧಾರವಾಡದ ಅಕ್ಷರತಾಯಿ, ದತ್ತಿದಾನಿ ಎಂದೇ ಹೆಸರುವಾಸಿಯಾದಶ್ರೀಮತಿಲೂಸಿಕೆಸಾಲ್ಡಾನಾ ಅವರ ಜೀವನ ಕುರಿತಾದ 'ಬದುಕು ಬಂಡಿ' ಚಲನಚಿತ್ರ ಬಿಡುಗಡೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನೆರವೇರಿತು.

ಶ್ರೀಮತಿಲೂಸಿಸಾಲ್ಡಾನಾಸೇವಾಸಂಸ್ಥೆ,ನವರಸ ಸ್ನೇಹಿತರ ವೇದಿಕೆ(ರಿ) ಧಾರವಾಡ ಇವರ ಸಹಯೋಗದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸಹಕಾರದೊಂದಿಗೆ ಭಾವೈಕ್ಯತೆ ಸಾರುವ ರೀತಿಯಲ್ಲಿ ಹಿಂದೂ–ಮುಸ್ಲಿಂ–ಕ್ರೈಸ್ತ ಗುರುಗಳ ಸಾನಿಧ್ಯದಲ್ಲಿ ಶಂಕರ ಹಲಗ್ತತಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ ತಮ್ಮ ದುಡಿತದ ಹಣವನ್ನು ಶಿಕ್ಷಣ ರಂಗಕ್ಕೆ ದಾನವಾಗಿ ನೀಡುತ್ತಿರುವ ಲೂಸಿ ಸಾಲ್ಡಾನ ಅವರ ಕಾರ್ಯ ಶ್ಲಾಘನೀಯ ಎಂದರು. 'ಬದುಕು ಬಂಡಿ' ಚಲನಚಿತ್ರ ಬಿಡುಗಡೆ ಮಾಡಿದ ವಿಧಾನಪ–ರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನಿವೃತ್ತ ಶಿಕ್ಷಕಿ ಲೂಸಿ ಸಾಲ್ಡಾನ ಅವರು 112 ಸರಕಾರಿ ಶಾಲೆಗಳಿಗೆ 80 ಲಕ್ಷ ದತ್ತಿ ನೀಡಿದ್ದು ಇದು ಶಿಕ್ಷಣದ ಬಗೆಗಿನ ಅವರ ಕಾಳಜಿ ತೋರುತ್ತದೆ ಎಂದರು. ಶಿಕ್ಷಕಸಾಹಿತಿವೈ.ಬಿ.ಕಡಕೋಳರವರ ಸಂಪಾದಿತ ಕೃತಿಯಾಧರಿಸಿ ನಿರ್ಮಿಸಲಾದ ಚಿತ್ರವನ್ನು ಧಾರವಾಡ, ಹೊನ್ನಾಪೂರ, ಅರವಟಗಿ, ಅಂಬೊಳ್ಳಿ, ಇನಾಮ ಹೊಂಗಲ್, ಹೆಬ್ಬಳ್ಳಿ ಮೊದಲಾದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ, ಚಿತ್ರದಲ್ಲಿ ಎರಡು ಹಾಡುಗಳಿವೆ ಎಂದು ಸಹನಿರ್ದೇಶಕ ಎನ್.ಬಿ.ದ್ಯಾಪೂರ ತಿಳಿಸಿದರು. ರಜಾದಿನಗಳಲ್ಲಿ ತಮ್ಮ ಎಲ್ಲ ವಯುಕ್ತಿಕ ಕೆಲಸ ಕಾರ್ಯಗಳನ್ನು ಬದಿಗೊತ್ತಿ 50ಕ್ಕೂ ಮಿಕ್ಕಿ ಶಿಕ್ಷಕರು ಇಲಾಖೆಗಳವರ ಸಹಕಾರದೊಂದಿಗೆ ಸರಕಾರಿ ಶಾಲೆಯಲ್ಲೇ ಓದುತ್ತಿರುವ 50ಕ್ಕೂ ಮಿಕ್ಕಿ ಮಕ್ಕಳನ್ನು ಚಿತ್ರದಲ್ಲಿ ಅಭಿನಯಕ್ಕೆ ಅವಕಾಶ ಕಲ್ಪಿಸುವ ಮೂಲಕ ಚಿತ್ರತಂಡದವರು ಮಕ್ಕಳ ಪ್ರತಿಭೆಯನ್ನೂ ಬೆಳಕಿಗೆ ತಂದಿರುವುದು ವಿಶೇಷ ಎಂದು ನಿರ್ದೇಶಕ ಬಾಬಾಜಾನ ಮುಲ್ಲಾ ಹೇಳಿದರು.

ಪಾತ್ರವರ್ಗದಲ್ಲಿ ಫಾದರ್ ಡಾ॥ ಮೈಕೆಲ್ ಸೋಜ್,ಶ್ರೀಮತಿ ಲೂಸಿ.ಕೆ.ಸಾಲ್ಡಾನ್,ಶ್ರೀಮತಿ ಪ್ರಮೀಳಾ ಜಕ್ಕಣ್ಣವರ, ಜೆ.ಎಮ್.ಗಾಮನಗಟ್ಟಿ, ರಾಜೀವಸಿಂಗ್ ಹಲವಾಯಿ, ಲಕ್ಷ್ಮೀ.ಎಸ್.ಬಿ, ಶಾರುಕ್ ಮುಲ್ಲಾ, ಶಶಿಕುಮಾರ ಪತಂಗೆ, ಹುಸೇನ್ ಶ್ಯಾನವಾಡ, ಮಹಾಂತೇಶ ಹುಬ್ಬಳ್ಳಿ, ಮಹೇಶ್ವರಿ ಡಿ.ಯು, ದಿವ್ಯಾ ಶಾಂಬೇಕರ, ಮೌನೇಶ್ವರಿ ದ್ಯಾಪೂರ, ಚಂದ್ರವ್ವ ಹರತಕ್ಕಡಿ, ಐಶ್ವರ್ಯ ಬಿರಾದಾರ, ಎಲ್.ಐ.ಲಕ್ಕಮ್ಮನವರ ಮೊದಲಾದವರುಮನೋಜ್ಞವಾಗಿಅಭಿನಯಿಸಿದ್ದಾರೆ. ಛಾಯಾಗ್ರಹಣ ಮಹ್ಮದಯುಸೂಫ್ ಮುಲ್ಲಾ , ಗೀತ ಸಾಹಿತ್ಯ ಮಹಾದೇವ ಬಸರಕೋಡ, ಧ್ವನಿಮುದ್ರಣ ಮತ್ತು ಹಿನ್ನೆಲೆ ಸಂಗೀತ ವೈಭವಭಟ್, ರಕ್ಷಿತಾ ಭಟ್, ನೃತ್ಯ ಸಂಯೋಜನೆ ಮಲ್ಲನಗೌಡ ಪಾಟೀಲ, ಎಡಿ–ಟಿಂಗ್ ,ಡಿಐ, ಪವನ ಕುಲಕರ್ಣಿ ,ಹಿನ್ನೆಲೆ ಧ್ವನಿ ಆರತಿ ದೇವಶಿಕಾಮಣಿ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವಿರೇಶ ಹಂಡಗಿ, ಸಹನಿರ್ದೇಶನ ಎನ್.ಬಿ.ದ್ಯಾಪೂರ ,ಚಿತ್ರಕಥೆ–ಸಂಭಾಷಣೆ– ನಿರ್ದೇಶನ ಬಾಬಾಜಾನ ಮುಲ್ಲಾ ಅವರದಿದೆ.

–ಡಾ.ಪ್ರಭು ಗಂಜಿಹಾಳ

## ಇತಿಹಾಸ ಸುಪ್ರಸಿದ್ಧ ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವದ ನಿರ್ಮಾಣದ ಕಾರ್ಯ ಭರದಿಂದ ನಡೆದಿರುವುದು





**ಮೊರಬ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಮೊರಬ ಗ್ರಾಮದಲ್ಲಿ ಪ್ರತಿ ವರ್ಷ ಪದ್ಧತಿಯಂತೆ 1946 ನೇ. ಕ್ರೋಧಿನಾಮ ಸಂವತ್ಸರದ ಪುಷ್ಯ ಶುದ್ಧ ಪಂಚಮಿ 2025 ಜನವರಿ–4 ರಂದು ತಾಲೂಕಿನ ಮೊರಬ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವದ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಕಳೆದ ಬುಧವಾರ ತೇರಿನ ಗಾಲಿಗಳಿಗೆ ಪೂಜಾ ಕೈಂಕರ್ಯ ನಡೆದು, ಗ್ರಾಮದ ಬಡಿಗೇರ್ ಈರಣ್ಣ ಹಾಗೂ ಪ್ರಕಾಶ್ ಆಚಾರ್ ಇವರಿಗೆ ದೇವಸ್ಥಾನ ಮಂಡಳಿಯವರು ಅಕ್ಕಿಪಡಿ ಹಾಗೂ ಕಾಣಿಕೆಯನ್ನು ಸಂದಾಯ ಮಾಡುವ ಮೂಲಕ ಭವ್ಯ ರಥದ ನಿರ್ಮಾಣದ ಹೊಣೆಯನ್ನು ನಿಭಾಯಿಸಲು ಕೋರಿದರು. ಸಣ್ಣ ವೀರಣ್ಣನ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಮಂಗಳ ವಾದ್ಯಗಳ ಮೂಲಕ ರಥೋತ್ಸವದ ಮೂಲಾಧಾರವಾದ ರಥದ ಗಡ್ಡಿಯನ್ನು ಶೆಡ್ಡಿನಿಂದ ಹೊರಗೆಳೆದು, ನಿರ್ಮಾಣಕ್ಕೆ ಬೇಕಾದ ಸಕಲ ಸಲಕರಣೆಗಳಿಗೆ ಪೂಜೆ ನೆರವೇರಿಸಿದರು. ತೇರು ಕಟ್ಟುವ ಮಿಣಿ, ಬಂಧಿಸುವ ಬೃಹತ್ ಹಗ್ಗಗಳ ಸುಸ್ಥಿತಿಯನ್ನು ಪರಿಶೀಲನೆ ನಡೆಸುವ ಮೂಲಕ ಹೊರಗೆ ಇರಿಸಲಾಯಿತು. ಇತ್ತ ಮೊರಬ ಗ್ರಾಮದ ಪ್ರತಿಯೊಂದು ಕುಟುಂಬವು ಮನೆಗೆ ಸುಣ್ಣ, ಬಣ್ಣ ಬಳಿಯುವ ಕಾರ್ಯವೂ ನಡೆಯುತ್ತದೆ. ಹೊಸ ಬಟ್ಟೆಗಳು, ನೆರ ಊರಿನಿಂದ ಆಗಮಿಸುವ ಬಂಧುಗಳಿಗೆ ಖಡಕ್ ರೊಟ್ಟಿ, ಶೇಂಗಾ, ಎಳ್ಳು, ಕಡ್ಲಿ, ಖಾರದ ಪುಡಿಗಳನ್ನು ತಯಾರಿಸುವ ಸಂಭ್ರಮ ದಲ್ಲಿರುತ್ತಾರೆ. ಸರ್ವ ಧರ್ಮದ ಸಮನ್ವಯ, ಸಮತಾ ಭಾವದಿಂದ ಸುಕ್ಷೇತ್ರ ಮೊರಬ ಗ್ರಾಮದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವುದರಿಂದ, ಗ್ರಾ.ಪಂ ಗ್ರಾಮಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತದೆ ಎಂದು ಅಧ್ಯಕ್ಷೆ ದುರುಗಮ್ಮ ವೆಂಕಟೇಶ್, ಉಪಾಧ್ಯಕ್ಷ ಕರಿಯಪ್ಪ ನೇತೃತ್ವದಲ್ಲಿ ಪದ್ಧತಿಯನುಸಾರ ಅನೂಚಾನವಾಗಿ ನಡೆದು ಕೊಂಡು ಬಂದ ರೀತಿಯಲ್ಲಿ ರಥೋತ್ಸವ ಸಂಭ್ರಮದ ಸಿದ್ಧತೆಯಲ್ಲಿ ಸರ್ವ ಸದಸ್ಯರ ಒಪ್ಪಿಗೆಯಂತೆ ನಿರ್ಣಯವನ್ನು ತೆಗೆದು ಕೊಳ್ಳುವ ಮೂಲಕ ಭಕ್ತರಿಗೆ ಯಾವುದೇ ಕೊರತೆ ಯಾಗದಂತೆ ಮುಂಜಾಗ್ರತೆಯನ್ನು ವಹಿಸಿ ಕೊಳ್ಳುವುದು ನಡೆದಿದೆ. ಗ್ರಾಮದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ರಥೋತ್ಸವ ಸಾಗುವ ರಹದಾರಿಯ ನಿರ್ವಹಣೆ, ಚರಂಡಿ ನೀರು ನಿಲ್ಲದಂತೆ ಕ್ರಮ ತೆಗೆದು ಕೊಳ್ಳುವುದು ಇತರೆ ಕಾರ್ಯಗಳು ಭರದಿಂದ ನಡೆದಿದೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ.ಬಿ. ಸಾಲುಮನೆ. ಕೂಡ್ಲಿಗಿ.ವಿಜಯನಗರ**

## ತಬಲಾ ಮಾಂತ್ರಿಕ ಉಸ್ತಾದ ಝಾಕೀರ ಹುಸೇನಗೆ ನುಡಿ ನಮನ



**ಬಾಗಲಕೋಟೆ :** ವಿಶ್ವವಿಖ್ಯಾತ ತಬಲಾ ಮಾಂತ್ರಿಕ ಉಸ್ತಾದ ಝಾಕೀರ ಹುಸೇನ್ ಅವರಿಗೆ ಸೋಮವಾರ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗದಿಂದ ನುಡಿ ನಮನ ಮೂಲಕ ಶೃದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಮಹಾವಿದ್ಯಾಲಯದ ಸಭಾಂಗಣದಲ್ಲಿ ಉಸ್ತಾದ ಝಾಕೀರ ಹುಸೇನ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿ ನಂತರ ಮೌನಾಚರಣೆ ಮೂಲಕ ಶೃದ್ಧಾಂಜಲಿ ಸಲ್ಲಿಸಿದರು, ಇದೇ ಸಂದರ್ಭದಲ್ಲಿ ಮಾತನಾಡಿದ ಮಹಾವಿದ್ಯಾಲಯ ಪ್ರಾಚಾರ್ಯ ಎಸ್.ಆರ್. ಮುಗನೂರಮಠ ಹಿಂದೂಸ್ತಾನಿ ಸಂಗೀತದ ತಬಲಾ ವಾದ್ಯದಲ್ಲಿ ಹೊಸ ಅನ್ವೇಷಣೆಗಳಿಂದ ವಿಶ್ವವಿಖ್ಯಾತಿಯನ್ನು ಪಡೆದಿದ್ದರು ಎಂದರು. ಸಂಗೀತ ವಿಭಾಗದ ಮುಖ್ಯಸ್ಥ ಡಾ. ಕೆ. ವಿ. ಮಠ, ಡಾ. ಆರ್ ಎಮ್ ಬೆಣ್ಣೂರ ಮಾತನಾಡಿ ಝಾಕೀರ್ ಹುಸೇನ್ ಅವರು ತಬಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಸ್ಮ–ರಿಸಿದರು.

ಸಂತಾಪ ಸೂಚನೆ

ಬಾಗಲಕೋಟೆ: ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ. ವೀರಣ್ಣ ಸಿ. ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ್ ಎನ್.ಅಥಣಿ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಗುರುಬಸವ .ಎಸ್. ಸೂಳಿಭಾವಿ, ವೈದ್ಯಕೀಯ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಅಶೋಕ್ ಎಮ್.ಸಜ್ಜನ್ (ಬೇವೂರ್), ಆಡಳಿತಧಿಕಾರಿ ಡಾ. ವಿ. ಎಸ್. ಕಟಗಿಹಳ್ಳಮಠ, ಹಿರಿಯ ತಬಲಾ ವಾದಕರಾದ ಎಸ್ ಸಿ ಬಳ್ಳೂರ, ಪಂಡಿತ್ ಎಚ್. ಆರ್. ಬಡಿಗೇರ್, ಪಂಡಿತ್ ವಿ. ಜಿ. ಮಹಾಪುರುಷ, ಪಂಡಿತ್ ಸಿದ್ದರಾಮಯ್ಯ ಮಠಪತಿ, ಪ್ರಾಚಾರ್ಯ ಎಸ್ ಆರ್ ಮೂಗನೂರಮಠ, ಡಾ. ಕೆ. ವಿ. ಮಠ, ಡಾ. ಆರ್. ಎಮ್. ಬೆಣ್ಣೂರ, ಶ್ರೇಯ ಜೋರಾಪುರ್ ಅಗಲಿದ ತಬಲಾ ಚೇತನ ಉಸ್ತಾದ್ ಝಾಕೀರ್ ಹುಸೇನ್ ಅವರಿಗೆ ಸಂತಾಪ ಸೂಚಿಸಿದ್ದಾರೆ.

## ಎಟಿಎಂ ಕಳ್ಳತನಕ್ಕೆ ಯತ್ನಿಸಿದ ಆರೋಪಿ ಬಂಧನ



**ಬಾಗಲಕೋಟೆ :** ವಿದ್ಯಾ ಗಿರಿಯ ಕೆನರಾ ಬ್ಯಾಂಕಿನ ಎಟಿಎಂ ಒಡೆದು ಕಳ್ಳತನ ಮಾಡಲು ಪ್ರಯತ್ನಿಸಿದ ಆರೋಪಿಯನ್ನು ನವನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶದ ಉಮರಿಕಲನ ಗ್ರಾಮದ ಮೊಹ್ಮದ ಅಮೀರ ರಶೀದ ಹುಸೇನ (27) ಬಂಧಿತ ಆರೋಪಿ ಎಂದು ಗುರುತಿಸಲಾಗಿದೆ. ಡಿ. 15 ಬೆಳಿಗ್ಗೆ ನವನಗರದ ಜಿಲ್ಲಾ ಆಸ್ಪತ್ರೆಯ ಬಳಿ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದ ಯುವಕನನ್ನು ಹಿಡಿದು ವಿಚಾರಣೆಗೆ ಒಳಪಡಿಸಿದಾಗ ವಿದ್ಯಾಗಿರಿಯ ಹಾಸ್ಟೆಲ್ ರಸ್ತೆಯಲ್ಲಿರುವ ಪಾನ್ ಶಾಪ್ ಕಳ್ಳತನ ಮಾಡಿದ್ದು ಕೆನರಾ ಬ್ಯಾಂಕ್ ಎಟಿಎಂ ಹೊಡೆದು ಕಳ್ಳತನಕ್ಕೆ ಪ್ರಯತ್ನಿಸಲಾಗಿತ್ತು. ಈ ಕಳ್ಳತನಕ್ಕೆ ಜಿಲ್ಲಾ ಆಸ್ಪತ್ರೆಯ ಮುಂದೆ ನಿಲ್ಲಿಸಿದ ಮೋಟಾರ್ ಸೈಕಲ್ ಅನ್ನು ಸಹ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಆರೋಪಿತನಿಂದ ಒಂದು ಬೈಕ್, ಪಾನ್ ಶಾಪ್ ನಲ್ಲಿ ಕಳ್ಳತನ ಮಾಡಿದ ವಸ್ತು, ಹಾಗೂ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಕಾರ್ಯಚರಣೆಯಲ್ಲಿ ಪಾಲ್ಗೊಂಡ ಸಿಪಿಐ ಆರ್. ಎಸ್. ಬಿರಾದಾರ, ಪಿಎಸ್ಐ ಕುಮಾರ ಹಿತ್ತಲಮನಿ, ಶ್ರೀಮತಿ ಎನ್.ಪಿ. ನಿಂಗನೂರ ಹಾಗೂ ಸಿಬ್ಬಂದಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಹಾಗೂ ಹೆಚ್ಚುವರಿ ಪೊಲೀಸ್ ಅಧಿಕರಾದ ಪ್ರಸನ್ನ ದೇಸಾಯಿ, ಮಹಾಂತೇಶ ಜಿದ್ದಿ ಅವರು ಕಾರ್ಯವನ್ನು ಶ್ಲಾಘಿಸಿ ಬಹುಮಾನ ಘೋಷಿಸಿದ್ದಾರೆ.

## ಸಂಭ್ರಮದ ದತ್ತ ಜಯಂತಿ ಆಚರಣೆ



**ಗುಳೇದಗುಡ್ಡ :** ಪಟ್ಟಣದ ಗೋಸ್ವಾಮಿ ಶ್ರೀರಾಮಭಾರತಿ ಮಠದಲ್ಲಿ ಶ್ರೀಗುರು ದತ್ತಾತ್ರೇಯ ಜಯಂತಿ ಮಹೋತ್ಸವದ ನಿಮಿತ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಬಹಳಷ್ಟು ಸಡಗರ ಸಂಭ್ರಮದಿಂದ ಜರುಗಿದವು.

ದತ್ತಾತ್ರೇಯ ಜಯಂತಿ ಮಹೋತ್ಸವದ ನಿಮಿತ್ತವಾಗಿ ಪುಣ್ಯಾವಾಚನ, ರುದ್ರಾಭಿಷೇಕ, ಮಹಾಪೂಜೆ ಕಾರ್ಯಕ್ರಮಗಳು ನಡೆದವು. ಶ್ರೀಗುರು ದತ್ತಾತ್ರೇಯರಿಗೆ ತೊಟ್ಟಿಲೋತ್ಸವ, ಸತ್ಯನಾರಾಯಣ ಪೂಜೆ ಸೇರಿದಂತೆ ಶ್ರೀದತ್ತ ದೇವರಿಗೆ ವಿಶೇಷ ಹೂವಾಲಂಕಾರ ಮಾಡಿ ಪೂಜಿಸಲಾಯಿತು.

ಮುರುಘಾಮಠದ ಕಾಶೀನಾಥ ಮಹಾಸ್ವಾಮಿಗಳು ಸಮಾರಂಭದ ಸಾನಿಧ್ಯ ವಹಿಸಿದ್ದರು.

ಹಿರಿಯ ಸಂಗೀತ ಕಲಾವಿದ ಚಿದಾನಂದಸಾ ಕಾಟವಾ ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆದವು. ಶಿಲ್ಪಾ ಶೀಲವಂತ, ಸರೋಜಾ ಭಾರತಿ, ಸವಿತಾ ಭಾರತಿ, ಪ್ರೇಮಾ ಭಾರತಿ, ಜಾನಕಿ ನರೆಗಲ್ಲ, ಮೀನಾಕ್ಷಿ ಅಂಬೇಕರ, ಸುಜಾತ ಬೋನಗೇರಿ ಸುವರ್ಣ ಅಂಗಡಿ, ಪ್ರತಿಭಾ ಕಠಾರಿಯಾ, ಪದ್ಮಾ ಪಾಟೀಲ, ಕೃಷ್ಣಾಬಾಯಿ ಗೋಸಾವಿ, ಕವಿತಾ ಗೋಸಾವಿ ಅವರಿಂದ ದತ್ತ ದೇವರ ತೊಟ್ಟಿಲೋತ್ಸವ ನಡೆಯಿತು.

ಚಂದ್ರು ನರೇಗಲ್ಲ, ಪ್ರಭಾಕರ ಜೋಶಿ, ಮಹೇಶ ಭಾರತಿ, ಮಂಜುನಾಥ ಭಾರತಿ, ಶ್ರೀರಾಮ ಭಾರತಿ ಇವರಿಂದ ಪೂಜಾ ಕಾರ್ಯಕ್ರಮ ನೆರವೇರಿದವು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ರಾಜಶೇಖರ ಶೀಲವಂತ, ಮುಖಂಡರಾದ ಸಂಪತ್ತಕುಮಾರ ರಾಠಿ, ಕಮಲಕಿಶೋರ ಮಾಲಪಾಣಿ, ಪ್ರಕಾಶ ಮುರಗೋಡ, ಅಪ್ಪುಧಾರವಾಡ,ಮಹೇಶಶೇಬಿನಕಟ್ಟಿ,ಕೃಷ್ಣಮೂರ್ತಿ ಹಂದ್ರಾಳ, ರವಿ ಬೀಳಗಿ, ಮೋಹನ ಕರನಂದಿ, ವಿಶ್ವನಾಥ ಭಾರತಿ ಇತರರು ಇದ್ದರು.

## ಬಾಗಲಕೋಟೆ ವಿಶ್ವವಿದ್ಯಾಲಯ ಮಹಿಳಾ ವಾಲಿಬಾಲ್ ತಂಡಕ್ಕೆ ಆಯ್ಕೆ

**ಬಾಗಲಕೋಟೆ :** ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐದು ವಿದ್ಯಾರ್ಥಿನಿಯರು ಬಾಗಲಕೋಟೆ ವಿಶ್ವವಿದ್ಯಾಲಯ ಮಹಿಳಾ ವಾಲಿಬಾಲ್ ತಂಡಕ್ಕೆ ಆಯ್ಕೆಯಾಗಿ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಬಾಗಲಕೋಟೆ ವಿವಿ ತಂಡವನ್ನು ಪ್ರತಿನಿಧಿಸಲಿದ್ದಾರೆ ಎಂದು ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಅವರು ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

ನವನಗರ ಸ.ಪ್ರ.ದ ಕಾಲೇಜಿನ ಕ್ರೀಡಾ ನಿರ್ದೇಶಕ ನೀಲಪ್ಪ ಕುರಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿನಿಯರಾದ ಎಡದಿಂದ ಕುಮಾರಿ ರೇಣುಕಾ ಮಡಿವಾಳರ, ಕುಮಾರಿ ದೀಪಾ ರಾಠೋಡ, ಕುಮಾರಿ. ಅರ್ಪಿತಾ ಪೂಜಾರಿ, ಕುಮಾರಿ ಉಷಾ ರಾಠೋಡ, ಕುಮಾರಿ ಗಾಯತ್ರಿ ಲಮಾಣಿ ಈ ಐದು ವಿದ್ಯಾರ್ಥಿನಿಯರು ಬಾಗಲಕೋಟೆ ವಿಶ್ವವಿದ್ಯಾಲಯದಮಹಿಳಾವಾಲಿಬಾಲ್ತಂಡದಿಂದ ಸ್ಪರ್ಧಿಸಿ, ತಮಿಳನಾಡಿನ ಜಿಪೇರಾ ವಿಶ್ವವಿದ್ಯಾಲಯ ಚನ್ನೈನಲ್ಲಿ ನಡೆಯುವ ದಕ್ಷಿಣಿ ಭಾರತ ಅಂತರ ವಿಶ್ವವಿದ್ಯಾಲಯದ ಮಹಿಳೆಯರ ವಾಲಿಬಾಲ್




ಚಾಂಪಿಯನ್ ಶಿಪ್‌ನಲ್ಲಿ ಈ ವಿದ್ಯಾರ್ಥಿನಿಯರು ಭಾಗವಹಿಸಲಿದ್ದಾರೆ. ಮಹಿಳಾ ವಾಲಿಬಾಲ್ ತಂಡಕ್ಕೆ ಆಯ್ಕೆಯಾದ ವಿದ್ಯಾರ್ಥಿನಿಯರಿಗೆ ಕಾಲೇಜಿನ ಸಿಡಿಸಿ ಅಧ್ಯಕ್ಷರು, ಸದಸ್ಯರು, ಪ್ರಾಚಾರ್ಯರು, ಐಕ್ಯೂಎಸಿ ಸಂಚಾಲಕರಾದ ಡಾ.ಲಕ್ಷ್ಮೀ ಕಟ್ಟಿಮನಿ ಮತ್ತು ಬೋಧಕ, ಬೋಧಕೇತರ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

## ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಇರಲಿ

**ಬಾಗಲಕೋಟ :** ಇತ್ತೀಚಿನ ದಿಗಳಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕಡಿಮೆ ಸಮಯದಲ್ಲಿಅಧಿಕ ಲಾಭದ ಮೋಹಕ್ಕೆ ಬೀಳದೆ ಅವುಗಳ ಬಗ್ಗೆ ಜನತೆಜಾಗೃತಿವಹಿಸಬೇಕು ಎಂದು ಸಿಪಿಆಯ್ ಗುರುನಾಥಚವ್ಹಾಣ ಹೇಳಿದರು. ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದಅಪರಾಧತಡೆ ಮಾಸಾಚರಣೆ ಕಾರ್ಯಕ್ರಮದಲ್ಲಿ ಸೈಬರ್ ಅಪರಾಧಗಳ ಬಗ್ಗೆ ಅವರು ಮಾತನಾಡಿದರು.

ಡಿಜಿಟಲ್ಅರೆಸ್ಟಪ್ರಕರಣಗಳುಹೆಚ್ಚಾಗುತ್ತಿದ್ದು ಭಯವನ್ನು ಹುಟ್ಟಿಸುವುದರ ಮೂಲಕ ವಿದ್ಯಾವಂತರನ್ನೇದೋಚಲಾಗಿತ್ತಿದೆ.

ಇವುಗಳ ಬಗ್ಗೆ ಅರಿವು ಹೊಂದಿ ಜನತೆಧೈರ್ಯದಿಂದ ಇದ್ದು ತಮ್ಮಆರ್ಥಿಕ ಸಂಪನ್ಮೂಲವನ್ನು ರಕ್ಷಿಸಿಕೊಳ್ಳಬೇಕು.

ವರ್ಕ ಫ್ರಾಮ್ ಹೋಂ ಎಂಬ



ವಾಟ್ಸಾಪ್‌ಗ್ರುಪ್ ಬಗ್ಗೆಯೂಜನತೆ–ಎಚ್ಚರದಿಂದಿದ್ದು ಯಾವುದೇ ಮಾಹಿತಿಯನ್ನು ನೀಡಬಾರದು–ಎಂದು ಸಲಹೆ ನೀಡಿದರು. ಕೃತಕಬುದ್ಧಿವ 'ತ್ತೆತಂತ್ರಜ್ಞಾನವನ್ನು ಕೆಲವರುದರ್ಬಳಕೆ ಮಾಡಿಕೊಂಡುಜನರನ್ನುವಂಚಿಸುತ್ತಿದ್ದಾರೆ. ಆನಲೈನ್ ವ್ಯಹಾರಗಳಿಗೆ ಆಶೆಬಿದ್ದುತಮ್ಮ ಹಣವನ್ನು ಕಳೆದುಕೊಂಡ ಹಲವರ ಉದಾಹರಣೆಗಳನ್ನು ಉಲ್ಲೇಖಿಸಿ ಅವುಗಳಿಂದ ದೂರವಿರುವಂತೆ ತಿಳಿಸಿದರು.

ವಿದ್ಯಾರ್ಥಿಗಳು ಮೊಬೈಲ್ ಬಳಕೆಯನ್ನು ಬಹಳಷ್ಟು ಜಾಗರೂಕತೆಯಿಂದ ಮಾಡುವುದರ ಮೂಲಕ ಇಂತಹ ವಂಚನೆ ಪ್ರಕರಣಗಳಿಂದ ದೂರವಿರಬೇಕುಎಂದರು. ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿಆಕರ್ಷಕ ಯೋಜನೆಗಳು ಮತ್ತು ಹಲವು ಆಮಿಷಗಳಿಗೆ ಒಳಗಾಗದೆ, ಕಂಪ್ಯೂಟರ ಹಾಗೂ ಅಂತರ್‌ಜಾಲದ ಮೂಲಕ 'ಜಾಣ'ರೇ ನಡೆಸುವಇಂತಹ ಕೃತ್ಯಗಳಿಂದ ರಕ್ಷಣೆ ಪಡೆಯಬೇಕು.

ಈ ದಿಶೆಯಲ್ಲಿ ಪೋಲೀಸ ಇಲಾಖೆಯ ಇಂತಹಅರಿವಿನ ಕಾರ್ಯಕ್ರಮಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದರು.

ವಾಯ್.ಎಚ್.ಗುಡೂರ ವಂದಿಸಿದರು. ಉಪವಿಭಾಗದಅಧ್ಯಕ್ಷ ಡಾ.ಪಿ.ಆರ್. ಜೋಶಿ, ಜಂಟೀ ಕಾರ್ಯದರ್ಶಿ ಡಾ. ಎಸ್.ಬಿ.ಪರ್ವತೀಕರ,

ಇಲಾಖೆಯ ಬಸವರಾಜ ಶಿವಪೂಜಿ,ಕುರಿ ಇದ್ದರು.

# ಸ್ವಾರ್ಥ ಭಾವನೆ ತೊರೆದು ಧರ್ಮ ಕ್ಷೇತ್ರ ಉಳಿಸಿ



**ಗುಳೇದಗುಡ್ಡ :** ಕಾಯಕದಲ್ಲಿ ಮೇಲು ಕೀಳು ಇಲ್ಲ. ದೇಶದಲ್ಲಿ ಪ್ರತಿಯೊಂದು ಕಾಯಕ್ಕೂ ತನ್ನದೇ ಆದ ಮಹತ್ವವಿದೆ. ಇರೋದು 3 ವೃತ್ತಿ ಅದು ಬ್ರಹ್ಮವೃತ್ತಿ, ವೈಶ್ಯ ವೃತ್ತಿ, ಕರ್ಮ ವೃತ್ತಿ ಆಗಿವೆ. ವೃತ್ತಿಗೆ ತಕ್ಕಂತೆ ಜಾತಿ ಹುಟ್ಟಿಕೊಂಡು ಸಮಾಜದಲ್ಲಿ ದೊಡ್ಡವರು ಸಣ್ಣವರು ಎಂಬ ಭಾವನೆ ಮೂಡುವಂತೆ ಮಾಡಿದೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹಿಸಬೇಕು. ನಮ್ಮ ಜಾತಿಯವರು ನಮ್ಮಲ್ಲಿಯೇ ಉಳಿಯಬೇಕು. ನಾವು ಬೇರೆ ಧರ್ಮಕ್ಕೆ ಮತಾಂತರಗೊಂಡ ದಲಿತ ಸಮಾಜದವರನ್ನು ಮನವೊಲಿಸಿ, ಹಿಂದೂ ಧರ್ಮಕ್ಕೆ ಮರಳಿ ತಂದು ಅವರಿಗೆ ಶಿಕ್ಷಣ ಸಂಸ್ಕಾರ ನೀಡಿ, ಸಮಾಜದ ಮುಖ್ಯವಾಹಿನಿಗೆ ಬರಮಾಡಿಕೊಂಡಿದ್ದೇವೆ. ಎಂದು ಕಣೇರಿ ಮಠದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಶ್ರೀಗಳು ಹೇಳಿದರು.

ಅವರು ಪಟ್ಟಣದಲ್ಲಿ ಗುರುಸಿದ್ದೇಶ್ವರ ಬೃಹನ್ಮಠದ ಗುರುಸಿದ್ದ ಪಟ್ಟದಾರ್ಯ ಶ್ರೀಗಳ 39 ನೇ ಪುಣ್ಯಾರಾಧನೆ ಮತ್ತು ಗುರುಬಸವ ದೇವರ ಪಟ್ಟಾಭಿಷೇಕ ಹಾಗೂ ಶರಣ ಸಂಗಮ, ಸಂಸ್ಥೆಯ ಸುವರ್ಣ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಸ್ವಾಮೀಜಿಗಳು ಮಠದ ಮಾಲೀಕರಲ್ಲ. ನಾವು ವ್ಯವಸ್ಥಾಪಕರಷ್ಟೇ. ನಿಜವಾದ ಮಾಲೀಕರು ಸಮಾಜದ ಭಕ್ತರು. ಸ್ವಾಮೀಜಿಗಳನ್ನು ಎಚ್ಚರಿಸುವ ಕೆಲಸವನ್ನು ಭಕ್ತರು ಮಾಡಬೇಕು. ಧಾರ್ಮಿಕ ಕ್ಷೇತ್ರಗಳಲ್ಲಿ ನಿಸ್ವಾರ್ಥದಿಂದ ವೃತ್ತಿ ಮಾಡಿ, ಅಲ್ಲಿ ಸ್ವಾರ್ಥದ ಭಾವನೆ ತೊರೆದು ಪ್ರತಿಯೊಬ್ಬರು ಧರ್ಮ ಕ್ಷೇತ್ರಗಳನ್ನು ಉಳಿಸಿಬೆಳೆಸುವಂತಾಗಬೇಕು. ಸನ್ಯಾಸಿಗಳು ಸನ್ಯಾಸಿಗಳಾಗಿಯೇ ಉಳಿಯಬೇಕು ಎಂದರು. ದೇಶದ ದೊಡ್ಡ ದುರಂತವೆಂದರೆ ವರ್ಣದಲ್ಲಿ ಜಾತಿಗಳನ್ನು ತಂದಿದ್ದು, ಆದರೆ ಹಿಂದೆ ಹಾಗಿರಲಿಲ್ಲ ಜಾತಿಗಳಲ್ಲಿ ವರ್ಣಗಳಿದ್ದವು, ಕಣೇರಿ ಮಠಕ್ಕೆ ಎಲ್ಲ ಜಾತಿಯ ಭಕ್ತರಿದ್ದಾರೆ. ಜಂಗಮರ ಓಣಿಯಲ್ಲಿ, ಡೋಹರ ಓಣಿಯಲಿ ನಮ್ಮ ಮಠಗಳಿವೆ. ಎಲ್ಲರನ್ನೂ ಸಮಾನವಾಗಿ ಕಾಣುತ್ತೇವೆ. ಅದಕ್ಕೆ ಪ್ರತಿರೂಪವಾಗಿ ಗುರುಸಿದ್ದೇಶ್ವರ ಬ್ರಹನ್ಮಠವು ಸಾಕ್ಷಿಯಾಗುತ್ತಿದೆ.

ಸಸ್ತಾಪೂರದ ಡಾ.ಈಶ್ವರಾನಂದ ಶ್ರೀಗಳು ಅಧ್ಯಕ್ಷತೆ ವಹಿಸಿದ್ದರು. ಗುರುಸಿದ್ದೇಶ್ವರ ಬ್ರಹನ್ಮಠದ ಶ್ರೀ ಬಸವರಾಜ ಪಟ್ಟದಾರ್ಯ ಶ್ರೀಗಳು, ನಿಯೋಜಿತ ಪೀಠಾಧಿಕಾರಿ ಗುರುಬಸವ ದೇವರು, ಬಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು, ಹಂಸನೂರು ಶಿವಾನಂದ ಮಠದ ಬಸವರಾಜೇಂದ್ರ ಶ್ರೀಗಳು, ಟೆಂಗಿನಮಠದ ಮಲ್ಲಿಕಾರ್ಜುನ ದೇವರು, ಮೈದರಂಗಿಯ ಮೃತ್ಯುಂಜಯ ಮಹಾಸ್ವಾಮಿಗಳು, ಗುರುಪಾದ ಶಿವಾಚಾರ್ಯ ಶ್ರೀಗಳು, ರುದ್ರಾಕ್ಷಿಮಠದ ಅಲ್ಲಮಪ್ರಭು ಮಹಾಸ್ವಾಮಿಗಳು ಸಾನಿಧ್ಯವಹಿಸಿದರು.

ಈ ಸಂದರ್ಭದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಸ್.ಜಿ.ನಂಜಯ್ಯನಮಠ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಮಾದಿಗ ಸಮಾಜದ ರಾಜ್ಯಾಧ್ಯಕ್ಷ ಶಂಕರ ಪೂಜಾರಿ, ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ, ರಾಜು ಜವಳಿ, ನಾಗೇಶಪ್ಪ ಪಾಗಿ ಸೇರಿದಂತೆ ಇತರರು ಇದ್ದರು.

# ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಯಡಿ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ವಿಜಯಪುರ :** 2024–25ನೇ ಸಾಲಿನ ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿ ಕುರಿ ಸಾಕಾಣಿಕೆ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯಡಿಯಲ್ಲಿ ಫುಡ್ ಕಾರ್ಟ್‌ಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರು ನೇರವಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅಥವಾ ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಬೆಂಗಳೂರು ಒನ್‌ಗಳಲ್ಲಿ ಆನಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಡಿಸೆಂಬರ್ 29 ಅರ್ಜಿ ಸಲ್ಲಿಸಲು ಕೊನೆಯ ದಿವಾಗಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಡಾ. ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸುವಂತೆ ಜಿಲ್ಲಾ ವ್ಯವಸ್ಥಾಪಕರ ಪ್ರಕಟಣೆ ತಿಳಿಸಿದೆ.

# ಅಭಿವೃದ್ಧಿ ವಿರೋಧಿ ಧೋರಣೆ ಸಹಿಸುವುದಿಲ್ಲ: ದೇವಸ್ಥಾನ ಕೆಡವಲು ಬಂದರೆ ತಕ್ಕ ಪಾಠ ಕಲಿಸುತ್ತೇವೆ: ಶಾಸಕ ಸತೀಶ್ ರೆಡ್ಡಿ ಎಚ್ಚರಿಕೆ



**ಬೆಂಗಳೂರು :** ರಾಜ್ಯದಲ್ಲಿ ಅಭಿವೃದ್ಧಿ ವಿರೋಧಿ ಧೋರಣೆ ಅನುಸರಿಸುತ್ತಿದ್ದು, ಅಧಿಕಾರಕ್ಕೆ ಬಂದ ನಂತರ ಜನರನ್ನು ಮರೆಯುತ್ತಿರುವವರೆಂದರೆ ಅದು ಕಾಂಗ್ರೆಸ್ ಸರ್ಕಾರ ಎಂದು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಸತೀಶ್ ರೆಡ್ಡಿ ಟೀಕಿಸಿದ್ದಾರೆ.

ಹಿಂದೂ ದೇವಸ್ಥಾನವನ್ನು ಒಡೆಯುವ, ತೆರವುಗೊಳಿಸುವ, ದೇವಾಲಯದ ಅಭಿವೃದ್ಧಿಗೆ ಅಡ್ಡಿಪಡಿಸುವ ಕಾರ್ಯವನ್ನು ನಾವೆಂದಿಗೂ ಸಹಿಸುವುದಿಲ್ಲ. ದೇವಸ್ಥಾನ ಒಡೆಯಲು ಬಂದರೆ ನಿಮಗೆ ಸರಿಯಾದ ಪಾಠ ಕಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಜೆಪಿ ನಗರ ಪುಟ್ಟೇನಹಳ್ಳಿ ಕೆರೆ ಆವರಣದಲ್ಲಿ ತಮ್ಮ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಬಾಗೀನ ಅರ್ಪಿಸಿ, ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಹಿಂದುಗಳಲ್ಲಿ ಒಡಕಿರಬಾರದು. ನಾವೆಲ್ಲಾ ಒಂದಾಗಿರಬೇಕು. ಹಾಗೆಂದು ನಾವು ಮುಸ್ಲೀಂ ವಿರೋಧಿಗಳಲ್ಲ. ಎಲ್ಲಾ ಜನ ಸಮುದಾಯ ಒಗ್ಗಟ್ಟಾಗಿರೋಣ. ನಮ್ಮ ಅಭಿವೃದ್ಧಿಗೆ ಅಡ್ಡಿಪಡಿಸುವವರಿಗೆ ತಕ್ಕ ಪ್ರತ್ಯುತ್ತರ ನೀಡೋಣ ಎಂದರು.

ಇಲ್ಲಿನ ಸಾರಕ್ಕಿ ಕೆರೆ, ಜರಗನಹಳ್ಳಿ, ಪುಟ್ಟೇನಹಳ್ಳಿ ಭಾಗದಲ್ಲಿ ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿ ಇತ್ತು. ಇದೀಗ ಸುಂದರ ಕೆರೆ, ಉತ್ತಮ ಪರಿಸರದ ವಾತಾವರಣ ನಿರ್ಮಿಸಲಾಗಿದೆ. ಆದರೆ ಕಾಂಗ್ರೆಸ್ಸವರು ಅಭಿವೃದ್ಧಿ ಕೆಲಸಗಳನ್ನು ತಡೆ ಹಿಡಿಯುವ ಕೆಲಸ ಮಾಡುತ್ತಿದ್ದಾರೆ. ಸಚಿವ ಜಮೀರ್ ಅಹಮದ್ ಖಾನ್ ಅವರು ಸಹ ನಮ್ಮ ದೇವಸ್ಥಾನಗಳ ಮೇಲೆ ಕಣ್ಣು ಹಾಕಿದ್ದಾರೆ. ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಬಂಧಿಸಬೇಕು. ಬಿಬಿಎಂಪಿ ಕಟ್ಟಿರುವ ಆಸ್ತಿಯನ್ನು ಕೆಡವಲು ಹೊರಟಿದ್ದು, ಸಮಾಜ ದ್ರೋಹಿ ವ್ಯಕ್ತಿಗಳನ್ನು ಸೆರೆಮನೆಗೆ ಕಳುಹಿಸುವುದು ನಮ್ಮ ಗುರಿಯಾಗಿದೆ ಎಂದರು.

ಜನ ಸದಾ ಕಾಲ ಅಭಿವೃದ್ಧಿ ಕೆಲಸ ಮಾಡುವವರ ಪರವಾಗಿರುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಜನ ಮೆಚ್ಚುತ್ತಾರೆ. ಅವರು ಬಡವರ ಪರವಾಗಿದ್ದು, ಜನಪರ ಕೆಲಸ ಮಾಡುತ್ತಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಪಾರ್ಕ್ ಒತ್ತುವರಿ ಮಾಡಿಕೊಂಡಿದ್ದವರು ಕಾಂಗ್ರೆಸ್ ನಾಯಕರು. ಶಾಸಕರಾದ ನಂತರ ಕ್ಷೇತ್ರದಲ್ಲಿ ಒಂದು ಲಕ್ಷ ಬಿಪಿಎಲ್ ಕಾರ್ಡ್ ನೀಡಿದ್ದೇವೆ. ಈಗ ಕಾಂಗ್ರೆಸ್ ನವರು ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿದ್ದಾರೆ. ಶಕ್ತಿ ಯೋಜನೆ ಬೇಡ ಎಂದು ಡಿ.ಕೆ. ಶಿವಕುಮಾರ್ ಹೇಳುತ್ತಿದ್ದಾರೆ. ಯಾವ ಹೆಣ್ಣುಮಕ್ಕಳು ಬಸ್ ಬೇಡ ಎಂದು ಹೇಳಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿ ಯೂನಿಟ್ ವಿದ್ಯುತ್ ದರ 4.25 ರೂ ನಿಂದ ಕೇವಲ ಒಂದು ವರ್ಷದಲ್ಲಿ 9 ರೂಗೆ ಏರಿಕೆ ಮಾಡಿದ್ದಾರೆ. ಉಪ ಚುನಾವಣೆಯಲ್ಲಿ ಹೇಗೋ ಕಾಂಗ್ರೆಸ್ ನವರು ಗೆದ್ದಿದ್ದಾರೆ. ಆದರೆ ಆದರೆ ಈಗ ಚುನಾವಣೆ ಬಂದರೆ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಅಭಿವೃದ್ಧಿಗೆ ಅಡ್ಡಿ ಮಾಡುವವರಿಗೆ ಇದು ಕೊನೆ ಎಚ್ಚರಿಕೆ. ನಮ್ಮ ತಂಟೆಗೆ ಬಂದರೆ ಸರಿಯಾದ ಪಾಠ ಕಲಿಸುತ್ತೇವೆ ಎಂದು ಹೇಳಿದರು.

ಮಾಜಿ ಉಪ ಮೇಯರ್ ರಾಮ್ ಮೋಹನ್ ರಾಜ್ ಮಾತನಾಡಿ, ಎರಡು ದಶಕಗಳಿಂದ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸತೀಶ್ ರೆಡ್ಡಿ ಇನ್ನೂ ಉನ್ನತ ಸ್ಥಾನಕ್ಕೆ ಏರಲಿ. ರಾಜಕೀಯ ಎಂದರೆ ಅದು ಜನ ಸೇವೆ. ಸೇವೆಯಲ್ಲಿ ಪೈಪೋಟಿ ಇರಬೇಕೇ ಹೊರತು ಕುತಂತ್ರ ರಾಜಕಾರಣದಲ್ಲಿ ಅಲ್ಲ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಬಿಬಿಎಂಪಿ ಸದಸ್ಯರಾದ ಜಾಲಿ ರಮೇಶ್ ಉಪಸ್ಥಿತರಿದ್ದರು.

# ಮುಚಖಂಡಿ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವ ನಿಮಿತ್ಯ ಆಯ್ಯಾಚಾರ, ಶಿವದೀಕ್ಷೆ ಧರ್ಮಾಚರಣೆಯ ಜಂಗಮರು ಪರಮಾತ್ಮಸ್ವರೂಪಿಗಳು: ಸಿದ್ದಲಿಂಗಶಿವಾಚಾರ್ಯ



**ಬಾಗಲಕೋಟೆ :** ನಿರಂತರ ಧರ್ಮಾಚರಣೆ ಮೂಲಕ ಧಾರ್ಮಿಕ ಜಾಗೃತಿ ಮಾಡುತ್ತಿರುವ ಜಂಗಮರು ಪರಮಾತ್ಮ ಸ್ವರೂಪಿಗಳಾಗಿದ್ದಾರೆ ಎಂದು ಬಿಲ್ ಕೆರೂರಿನ ಬಿಲ್ವಾಶ್ರಮದ ಸಿದ್ದಲಿಂಗ ಶಿವಾಚಾರ್ಯಮಹಾಸ್ವಾಮಿಗಳು ಹೇಳಿದರು.

ಅವರು ಮುಚಖಂಡಿಯ ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ದೇವಸ್ಥಾನದಲ್ಲಿ ರವಿವಾರ ಜರುಗಿದ ಉಚಿತ ಆಯ್ಯಾಚಾರ ಹಾಗೂ ಶಿವದೀಕ್ಷೆ ಕಾರ್ಯಕ್ರಮದಲ್ಲಿ ವಟುಗಳಿಗೆ ದೀಕ್ಷೆ ನೀಡಿ ಮಾತನಾಡಿದರು.

ಜೋಳಿಗೆ ಹಿಡಿದು ಮನೆ ಮನೆಗೆ ತೆರಳಿ ಜನರ ಕಷ್ಟಗಳಿಗೆ ಪರಿಹಾರದ ಮಾರ್ಗ ಸೂಚಿಸಿ, ಮನೆಯಲ್ಲಿನ ಧರ್ಮಾರಣೆ ಫಾಲನೆ ಪೋಷನೆಗಳ ಬಗ್ಗೆ ತಿಳಿಸುತ್ತಾ ಧಾರ್ಮಿಕ ಜಾಗೃತಿ ಮೂಡಿಸುತ್ತಿರುವ ಜಂಗಮರು,ಸ್ವತ: ಧರ್ಮಾರಣೆ ಮೂಲಕ ಧಾರ್ಮಿಕ ಜಾಗೃತಿ ಮೂಡಿಸುವುದರ ಜೊತಗೆ ಭಾವೈಕ್ಯತೆಯನ್ನು ಎತ್ತಿಹಿಡಿಯುವ ಕಾರ್ಯ ಮಾಡುತ್ತಿದ್ದಾರೆ, ದೀಕ್ಷೆ ಪಡೆ ವಟುಗಳು ದಿನನಿತ್ಯ ಧರ್ಮಾಚರಣೆ ಮೂಲಕ ಜೀವನವನ್ನು ನಡೆಸಬೇಕು, ಪ್ರತಿವರ್ಷದಂತೆ ಈ ವರ್ಷವೂ ಕೂಡಾ ಜಾತ್ರೆ ನಿಮಿತ್ಯ ಜಂಗಮರಿಗೆ ಆಯ್ಯಾಚಾರ, ಭಕ್ತರಿಗೆ ಶಿವದೀಕ್ಷೆ ನೀಡಲಾಗಿದೆ, ಆಯ್ಯಚಾರ ಪಡೆದ ವಟುಗಳು ಇಂದಿನಿಂದ ಜಂಗಮರಾಗಿದ್ದು ದೈನಂದಿನ ಜೀವನದಲ್ಲಿ ಲಿಂಗಪೂಜೆ ಯೊಂದಿಗೆ ಧರ್ಮಾಚರಣೆ ಪಾಲನೆ ಮಾಡಬೇಕು ಎಂದರು.

ವೀರಭದ್ರೇಶ್ವರ ಕಾರ್ತಿಕೋತ್ಸವ ಹಾಗೂ ರಥೋತ್ಸವ ಸಮಿತಿ ಕಾರ್ಯಾಧ್ಯಕ್ಷರಾದ ಗುರುಬಸವ ಸೂಳಿಬಾವಿ ಮಾತನಾಡಿ ಮುಚಖಂಡಿಯಲ್ಲಿ ಜಾತ್ರೆ ನಿಮಿತ್ಯ ವೀರಭದ್ರೇಶ್ವರ ದೇವಸ್ಥಾನದ ವತಿಯಿಂದ ಕಳೆದ 50 ವರ್ಷಗಳಿಂದ ಧಾರ್ಮಿಕ ಕಾರ್ಯಗಳಾದ ಆಯ್ಯಾಚಾರ ಮತ್ತು ಶಿವದೀಕ್ಷೆಗಳನ್ನು ಉಚಿತವಾಗಿ ಮಾಡುತ್ತಾ ಬಂದಿದ್ದು ಪ್ರತಿವರ್ಷದಂತೆ ಈ ವರ್ಷ 150ಕ್ಕೂ ಹೆಚ್ಚು ವಟುಗಳಿಗೆ ಆಯ್ಯಾಚಾರ ಮಾಡಿದ್ದೇವೆ, ಹೊಸ್ತಿಲ ಹುಣ್ಣಿಮೆಯ ಮೊದಲನೇಯ ಮಂಗಳವಾರ ಭಕ್ತಿಭಾವದಿಂದ ವಿಜೃಂಭನೆಯಿಮದ ವೀರಭದ್ರೇಶ್ವರ ಮಹಾರಥೋತ್ಸವ ಜರುಗುತ್ತದೆ ಆದ ಕಾರಣ ಎಲ್ಲ ಭಕ್ತಾಧಿಗಳು ಜಾತ್ರಾ ಮಹೋತ್ಸವಕ್ಕೆ ಆಗಮಸಿರಿ ಎಂದರು.

ಈ ಸಂದರ್ಭದಲ್ಲಿ ಪ್ರಭುಸ್ವಾಮಿ ಸರಗಣಾಚಾರಿ,ಸಂಗಯ್ಯ ಸರಗಣಾಚಾರಿ, ಅಲ್ಲಯ್ಯ ಸರಗಣಾಚಾರಿ, ವಿ.ಡಿ.ಗಂಗಾವತಿ, ಚಂದ್ರಕಾಂತ ಲುಕ್, ಹರೀಶ ಪಾಟೀಲ, ಮಲ್ಲಯ್ಯ ಸರಗಣಾಚಾರಿ,ರಂಗಪ್ಪ ಜಳೇಂದ್ರ, ಸಿದ್ರಾಮಯ್ಯ ಮಠದ,ರಾಚಯ್ಯ ಸರಗಣಾಚಾರಿ, ಸೇರಿದಂತೆ ದೇವಸ್ಥಾನದ ಸದ್ಭಕ್ತರು, ಮುಚಖಂಡಿ ಗ್ರಾಮದ ಗುರು ಹಿರಿಯರು ಭಾಗವಹಿಸಿದ್ದರು.

# ಶಿಕ್ಷಣ ಕ್ಷೇತ್ರಕ್ಕೆ ಮಡಿವಾಳಪ್ಪ ಪಟ್ಟಣ ಕೊಡುಗೆ ಅಪಾರ



**ರಬಕವಿ :** ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದ ರಬಕವಿಯು ಮರಾಠಿಗರ ಪ್ರಭಾವಕ್ಕೆ ಒಳಗಾಗಿತ್ತು. ಇಂಥ ಸಂದರ್ಭದಲ್ಲಿ ರಬಕವಿಯಲ್ಲಿ ಕನ್ನಡ ಶಾಲೆಯನ್ನು ಸ್ಥಾಪಿಸಿ ಈ ಭಾಗದಲ್ಲಿ ಕನ್ನಡದ ಕಂಪನ್ನು ಅರಳಿಸಿದ ಕೀರ್ತಿ ಮಡಿವಾಳಪ್ಪ ವೀರಪ್ಪ ಪಟ್ಟಣ ಅವರದು. ಅವರು ಸ್ಥಾಪಿಸಿದ ದಿ. ರಬಕವಿ ಎಜ್ಯೂಕೇಶನ ಸಂಸ್ಥೆಯು ಈಗ ಹೆಮ್ಮರವಾಗಿ ಬೆಳೆದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ಬಸವರಾಜ ಯೆಂಡಿಗೇರಿ ತಿಳಿಸಿದರು.

ಅವರು ಮಂಗಳವಾರ ಇಲ್ಲಿನ ರಾಮಪ್ಪ ಚಿಕ್ಕೋಡಿ ಮೈದಾನದಲ್ಲಿ ಅವರ 75 ನೇ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಹಮ್ಮಿಕೊಂಡ ಪುತ್ಥಳಿಯ ಮೆರವಣಿಗೆ ಮತ್ತು ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಂಸ್ಥೆಯು ಪ್ರಾಥಮಿಕ ಶಿಕ್ಷಣದಿಂದ ಪದವಿಯವರೆಗೆ ಶಿಕ್ಷಣ ನೀಡುತ್ತಿದೆ. ಅದರಲ್ಲೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಇತ್ತೀಚೆಗೆ ನಮ್ಮ ಸಂಸ್ಥೆಯ ಕ್ರೀಡಾಪಟುಗಳ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗುತ್ತಿದ್ದಾರೆ. ಶಿಕ್ಷಣ ಸಂಸ್ಥೆಯ ಪ್ರಗತಿಗೆ ನಗರದ ಎಲ್ಲ ಜನರ, ನಿವೃತ್ತಿಯ ಸಿಬ್ಬಂದಿಯ ಮತ್ತು ಹಳೆಯ ವಿದ್ಯಾರ್ಥಿಗಳ ಸಹಕಾರ ಮುಖ್ಯವಾಗಿದೆ ಎಂದು ಯೆಂಡಿಗೇರಿ ತಿಳಿಸಿದರು.

ನಗರದ ಮುಖಂಡ ಬಿ. ಎಂ. ಪಟ್ಟಣ ಮೆರವಣಿಗೆಗೆ ಚಾಲನೆ ನೀಡಿದರು.

ಸಂಸ್ಥೆಯ ಉಪಾಧ್ಯಕ್ಷ ನಾರಾಯಣ ಬೋರಗಿನಾಯಕ, ಆರ್.ಜಿ. ಭಿಲವಡಿ, ಪ್ರೊ. ಎಂ. ಎಸ್. ಬದಾಮಿ, ಬಿ.ಎಂ. ಮಟ್ಟಿಕಲ್ಲಿ, ಚಿದಾನಂದ ಸೊಲ್ಲಾಪುರ, ಈಶ್ವರ ಬೀಳಗಿ, ಚಿದಾನಂದ ಗಾಳಿ, ಪಿ.ಆರ್. ಪಾವಟೆ, ಎಸ್. ಜಿ. ಭಿಲವಡಿ, ವಿ. ಎಸ್. ಹೊಸಮನಿ, ಸಿ.ಎಸ್. ಭುಯ್ಯಾರ, ಧರೆಪ್ಪ ಉಳ್ಳಾಗಡ್ಡಿ, ರಾಮಣ್ಣ ಹುಲಕುಂದ, ಬಿ. ಜಿ. ದುಂಬಾಳೆ, ಬಿ.ಎಸ್.ಕಾಂಬಳೆ, ಪಿ.ಎಚ್. ಪ್ರತಾಪ, ರಾಜೇಶ ನೋಟದ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಶೈಕ್ಷಣಿಕ ಸಾಧನೆ ಒಂದು ತಪಸ್ಸು: ಪ್ರೊ. ಚಂದ್ರಕಾಂತ ಹೊಸೂರ



**ಹುಲ್ಯಾಳ:**ನಿಮ್ಮನ್ನುಯಾವವಿಷಯನಿರಂತರ ಕಾಡುತ್ತಿರುತ್ತದೆಯೋ ಆ ವಿಷಯದ ಮೇಲೆ ನಿರಂತರ ಓದು ಅಧ್ಯಯನದಿಂದ ಮಾತ್ರ ವಿಷಯದ ತಲಸ್ಪರ್ಶಿ ಜ್ಞಾನ ಪಡೆಯಲು ಸಂಶೋಧನೆಯು ಸಂಶೋಧಕ ಜಾಣ್ಮೆ, ತಾಳ್ಮೆ ಹಾಗೂ ಚಿಕಿತ್ಸಕ ಭಾವದಿಂದ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಹುಲ್ಯಾಳ ಗ್ರಾಮದ ಸಮಾಜದವರು ಏರ್ಪಡಿಸಿದ 'ಸಾಧಕನಿಗೊಂದು ಸಲಾಮ' ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕ್ರಷ್ಣಾತೀರ ಕನ್ನಡ ಕಥನ ಸಾಹಿತ್ಯದಲ್ಲಿ ಸಾಂಸ್ಕೃತಿಕ ವಿನ್ಯಾಸಗಳು ಎಂಬ ಪ್ರಬಂಧ ಮಂಡಿಸಿ ಡಾಕ್ಟರೇಟ್ (ಪಿ.ಎಚ್.ಡಿ.) ಪದವಿ ಪಡೆದುದಕ್ಕಾಗಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಶಿಕ್ಷಣ ಪ್ರಾಣವಾಯುಇದ್ದಹಾಗೆ.ವ್ಯಕ್ತಿಯ ವೈಯುಕ್ತಿಕ ಬೆಳವಣಿಗೆಯೊಂದಿಗೆ [illegible] ಬೆಳವಣಿಗೆಯಾಗುವುದು. ಇಂದಿನ ಸ್ಪರ್ಧಾತ್ಮಕ ದಿನಮಾನಗಳಲ್ಲಿ ಸಾಂಪ್ರದಾಯಿಕ ಓದಿನೊಂದಿಗೆ ಸಂಶೋಧನಾತ್ಮಕ ಮನೋಭಾವ ಬೆಳೆಸಿಕೊಳ್ಳಿ. ಶೈಕ್ಷಣಿಕ ಗುಣಮಟ್ಟದ ಹೆಚ್ಚಳಕ್ಕೆ ಗ್ರಾಮೀಣ ವಿದ್ಯಾರ್ಥಿಗಳು ತೊಡಗಿಕೊಳ್ಳಬೇಕು ಎಂದು ಮುಂಖಂಡರಾದ ಮನೋಹರ ಸಿದ್ದಾಪೂರ ಹೇಳಿದರು.

ಶಿಕ್ಷಣ ರಂಗದಲ್ಲಿ ಗ್ರಾಮೀಣ ಮಕ್ಕಳಿಗಿಂತ ಪಟ್ಟಣದ ವಿದ್ಯಾರ್ಥಿಗಳು ಯಾವುದಕ್ಕೂ ಕಡಿಮೆ ಇಲ್ಲ ಎನ್ನುವಂತ ಮನೋಭಾವ ಬೆಳೆಯಬೇಕಾದರೆ ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ಓದು ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು ಎಂದು ಹೇಳುತ್ತಾ ಎದೆಗೆ ಬಿದ್ದ ಅಕ್ಷರ ಭೂಮಿಗೆ ಬಿದ್ದ ಬೀಜ ಇಂದಲ್ಲ ನಾಳೆ ಫಲ ಕೊಟ್ಟೇ ಕೊಡುವುದು ಎಂಬ ಹಿರಿಯ ಕವಿಯ ಮಾತುಗಳನ್ನು ಪರಪ್ಪ ನೀಲವಾಣಿ ನೆನಪಿಸಿ ಪ್ರೋತ್ಸಾಹದ ಮಾತುಗಳನ್ನಾಡಿದರು.

ಸಮಾರಂಭದಲ್ಲಿಮಹಾದೇವಪ್ಪಸಿದ್ದಾಪುರ, ಈರಸಂಗಪ್ಪ ಹೆಗ್ಗೂರ, ಶರಣಪ್ಪ ಮಾಶ್ಯಾಳ, ಮಲ್ಲಪ್ಪನೀಲವಾಣಿ, ಬಸಪ್ಪಸೋರಗಾಂವಿ, ವಿಜಯಕುಮಾರ ಸಿದ್ದಾಪುರ, ಪಂಚಾಕ್ಷರಿ ಮಮದಾಪುರ, ಶಂಭುಲಿಂಗ ಗೊಳಸಂಗಿ, ಬಾಹು ತಿಕೋಟಿ, ಸಂಗಣ್ಣ ಹೊಸೂರ, ಬಾಲಚಂದ್ರ ಸಿದ್ದಾಪೂರ ಹಾಗೂ ಊರಿನ ಹಿರಿಯರು ಉಪಸ್ಥಿತರಿದ್ದರು.

# ಜೀವನದಲ್ಲಿ ಸೋಲು ಗೆಲುವು ಒಪ್ಪಿಕೊಳ್ಳುವುದನ್ನು ಕ್ರೀಡೆಯಿಂದ ಕಲಿಯಲು ಸಾಧ್ಯ



**ರಬಕವಿ–ಬನಹಟ್ಟಿ :** ಜೀವನದಲ್ಲಿ ಸೋಲು ಗೆಲುವು ಒಪ್ಪಿಕೊಳ್ಳುವುದನ್ನು ಕ್ರೀಡೆಯಿಂದ ಕಲಿಯಲು ಸಾಧ್ಯ. ಆರಂಭಿಕ ಸೋಲುಗಳಿಂದ ನಿರಾಶೆಗೊಳ್ಳದೆ, ಸೋಲಿಗೆ ಕಾರಣಗಳನ್ನು ಅರಿತುಕೊಂಡು ಅವುಗಳ ಕುರಿತು ಆಲೋಚಿಸಿ ಮುಂದಿನ ದಿನಗಳಲ್ಲಿ ಸತತ ಪ್ರಯತ್ನ ಮತ್ತು ಆತ್ಮ ವಿಶ್ವಾಸದೊಂದಿಗೆ ಆಡಿದಾಗ ಗೆಲವು ನಿಶ್ಚಿತ. ಆದ್ದರಿಂದ ನಾವು ಕ್ರೀಡೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಜಮಖಂಡಿಯ ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ತಿಳಿಸಿದರು.

ಅವರು ಮಂಗಳವಾರ ಸಮೀಪದ ಯಲ್ಲಟ್ಟಿಯ ಕೊಣ್ಣೂರ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜುಗಳ ಬಾಲಕರ ಮತ್ತು ಬಾಲಕಿಯರ ಥ್ರೋಬಾಲ್ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಕ್ರೀಡೆ ನಮಗೆ ಶಿಸ್ತು ಮತ್ತು ನಾಯಕತ್ವದ ಗುಣಗಳನ್ನು ಕಲಿಸುತ್ತದೆ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಕೂಡಾ ವಿದ್ಯಾರ್ಥಿಗಳು ಗಮನ ನೀಡಬೇಕು. ಸೋಲು ಮತ್ತು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಆನಂದ ನ್ಯಾಮಗೌಡ ತಿಳಿಸಿದರು.

ಜಮಖಂಡಿಯ ಡಿವೈಎಸ್ಪಿ ಈ. ಶಾಂತವೀರ ಮಾತನಾಡಿ, ಕ್ರೀಡಾಪಟುಗಳಲ್ಲಿ ಕ್ರೀಡಾ ಸ್ಫೂರ್ತಿ ಮುಖ್ಯವಾದುದು. ಗ್ರಾಮೀಣ ಭಾಗದಲ್ಲಿ ರಾಜ್ಯ ಮಟ್ಟದ ಕ್ರೀಡಾ ಕೂಟಗಳನ್ನು ಆಯೋಜನೆ ಮಾಡುವುದು ಕಠಿಣವಾದ ಕಾರ್ಯ. ಇದರಿಂದ ಗ್ರಾಮೀಣ ಭಾಗದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರಾಚಾರ್ಯ ಬಸವರಾಜ ಕೊಣ್ಣೂರ ಮಾತನಾಡಿದರು.

ಸಂಸ್ಥೆಯ ಉಪಾಧ್ಯಕ್ಷ ನಿಖಿಲ ಕೊಣ್ಣೂರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಮಹಾದೇವ ಮೋಪಗಾರ, ರಬಕವಿ ಬನಹಟ್ಟಿ ನಗರದ ಗಣ್ಯರಾದ ಧರೆಪ್ಪ ಉಳ್ಳಾಗಡ್ಡಿ, ಸುರೇಶ ಚಿಂಡಕ, ಶ್ರೀಶೈಲ ದಲಾಲ, ಶ್ರೀಶೈಲ ಉಳ್ಳಾಗಡ್ಡಿ, ಡಾ. ಟಿ. ಎ. ಅರಳಿಕಟ್ಟಿ, ಮಹಾವೀರ ದೇಸಾಯಿ, ಜಮಖಂಡಿ ನಗರಸಭೆ ಅಧ್ಯಕ್ಷ ಪರಮಾನಂದ ಗೌರೋಜಿ, ಜಿ. ಎಸ್. ವಡಗಾವಿ, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಮಹಾಂತೇಶ ಮುರಗೋಡ, ಜಿಲ್ಲಾ ಕ್ರೀಡಾ ಸಂಯೋಜಕ ಬಸವರಾಜ ಹೂಗಾರ, ಬಿ. ಆರ್. ಗೊಡ್ಡಾಳೆ, ಚಂದ್ರಕಾಂತ ಹೊಸೂರ, ಮುರಗೇಶ ಮಗದುಮ್ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ ತಂಡದ ವ್ಯವಸ್ಥಾಪಕರು, ಕ್ರೀಡಾಪಟುಗಳು ಹಾಜರಿದ್ದರು.

# ಡಾ. ದಡ್ಡಿ ಅವರಿಗೆ ಡಾಕ್ಟ್ರೇಟ್ ಪ್ರದಾನ



**ಜಮಖಂಡಿ :** ನಗರದ ಹೃದಯರೋಗ ತಜ್ಞ, ನಾಡೋಜ ಡಾ. ಎಚ್. ಜಿ. ದಡ್ಡಿ ಅವರು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ ಮಾಡಿದ ಹೋರಾಟ ಮತ್ತು ರಚಿಸಿದ ಸಾಹಿತ್ಯವನ್ನು ಪರಿಗಣಿಸಿ ಅವರಿಗೆ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿದೆ.

ಇತ್ತೀಚೆಗೆ ನಡೆದ ಜಾನಪದ ವಿಶ್ವವಿದ್ಯಾಲಯದ 8 ನೇ ಮತ್ತು 9 ನೇ ಘಟಿಕೋತ್ಸವದಲ್ಲಿ 2021–22 ನೇ ಸಾಲಿನ ಜಾನಪದ ವೈದ್ಯ ಗೌರವ ಡಾಕ್ಟ್ರೇಟ್ ಪ್ರದಾನ ಮಾಡಿ ಗೌರವಿಸಲಾಗಿದೆ.

ಈ ಮೊದಲು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ–2005, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ–2014, ಬಿ.ಸಿ. ರಾಯ್ ಪ್ರಶಸ್ತಿ–2018, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ–2020 ಲಭಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

# ಮನಸ್ಸು ತಂಪುಗೊಳಿಸಲು ಶರಣರ ಸಂಘ ಬೇಕು



**ಬನಹಟ್ಟಿ :** ಬದುಕಿನಲ್ಲಿ ಯಾವುದಕ್ಕೆ ಮಹತ್ವ ಕೊಡಬೇಕೆಂದು ಶರಣರು ಹೇಳಿ ಕೊಟ್ಟಿದ್ದಾರೆ. ನಮ್ಮ ಮನಸ್ಸು ತಂಪು ಮಾಡಲು ಶರಣರ ಸಂಘ ಅಗತ್ಯವಾಗಿದೆಯೆಂದು ಅಂಕಲಿ–ಕೈತನಾಳಮಠದ ಶ್ರೀ ಫಕೀರಜ್ಜ ಸ್ವಾಮೀಜಿ ಹೇಳಿದರು.

ನಗರದ ವೀರಭದ್ರೇಶ್ವರ ಕಾರ್ತಿಕೋತ್ಸವ ಸಂದರ್ಭ ದೇವಸ್ಥಾನ ಆವರಣದಲ್ಲಿ ಭಕ್ತವೃಂದಕ್ಕೆ ಆಶೀರ್ವಾದ ನೀಡಿ ಮಾತನಾಡಿದ ಅವರು, ಬೆಳ್ಳಿ, ಬಂಗಾರದಿಂದ ಶೃಂಗಾರಗೊಂಡರೆ ಸಾಲದು. ನಮ್ಮ ಆಚರಣೆ ಬಂಗಾರವಾಗಬೇಕು. ಚೆನ್ನಾಗಿ ಕೆಲಸ ಮಾಡುವದೇ ಆಚಾರ, ಕೈ ಇರುವತನಕ ಚಂದದ ಕೆಲಸ ಮಾಡಿ. ಮಾತು ಬಲ್ಲವರು ಎಲ್ಲರ ಮನಸ್ಸು ಗೆಲ್ಲುವಂತೆ ಮಾತನಾಡಬೇಕೆಂದರು. ಒಳ್ಳೆಯ ವಿಚಾರ ಆಲಿಸಿ, ನಮ್ಮಲ್ಲಿರುವ ಒಳ್ಳೆಯ ವಿಚಾರ ವ್ಯಕ್ತಪಡಿಸಬೇಕು. ಅಂದಾಗ ಮಾತ್ರ ಹೆಚ್ಚಿನ ಜ್ಞಾನ ಬರಲು ಸಾಧ್ಯವೆಂದರು.

ಶಿವು ಬಾಗೇವಾಡಿ, ಚನ್ನಪ್ಪ ಗುಣಕಿ, ಪ್ರಶಾಂತ ಕೊಳಕಿ, ಬ್ರಿಜ್ಮೋಹನ ಡಾಗಾ, ಸದಾಶಿವ ಗೋಂದಕರ, ಪಟ್ಟಣ, ಅಶೋಕ ಶೀಲವಂತ, ಮಲ್ಲಣ್ಣ ಬಾವಲತ್ತಿ, ಕಿರಣ ಆಳಗಿ, ಕಾಡಪ್ಪ ಪಟ್ಟಣ, ಶಿವಾನಂದ ಬುದ್ನಿ, ಚನಬಸಯ್ಯ ಮಠಪತಿ, ದುರದುಂಡಯ್ಯ ಲಿಂಗದ, ರಾಜು ಲುಕ್ಕ, ಮಲ್ಲಪ್ಪ ಹೂಲಿ ಸೇರಿದಂತೆ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ ಹಾಗು ವೀರಭದ್ರೇಶ್ವರ ಕಾರ್ತಿಕೋತ್ಸವ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

# ಜನಸಾಮಾನ್ಯರಿಗೆ ಕಾನೂನು ಅರಿವು ಅತ್ಯವಶ್ಯಕವಾಗಿದೆ: ನ್ಯಾ. ಚಂದ್ರಶೇಖರ ಸಿ.

**ಕೊಪ್ಪಳ :** ಜನಸಾಮಾನ್ಯರಿಗೆ ಕಾನೂನು ಅರಿವು ಅತ್ಯವಶ್ಯಕವಾಗಿದೆ ಎಂದು ಕೊಪ್ಪಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಚಂದ್ರಶೇಖರ ಸಿ ಹೇಳಿದರು.



ಅವರು ಮಂಗಳವಾರ ಕೊಪ್ಪಳ ನಗರಸಭೆ ಹಿಂದುಗಡೆಯ ಕ್ರಿಸ್ತ ಜ್ಯೋತಿ ಚರ್ಚ್‌ನಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ನವ ದೆಹಲಿ, ರಾಷ್ಟ್ರೀಯ ಮಹಿಳಾ ಆಯೋಗ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಿ, ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ "ವಿಧಾನ ಸೆ ಸಮಾಧಾನ" ಎಂಬ ಮಹಿಳೆಯರಿಗಾಗಿ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

"ವಿಧಾನಸೆಸಮಾಧಾನ"ಎಂದರೆಕಾನೂನು ಮೂಲಕ ಪರಿಹಾರ ಪಡೆಯುವುದೇ ಆಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರಿಗೂ ಕಾನೂನು ಅರಿವು ಮೂಡಿಸಲು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ವೈವಾಹಿಕ ಸಂಬಂಧಗಳಲ್ಲಿ ಬರುವ ತೊಂದರೆಗಳು, ಆಸ್ತಿಗೆ ಸಂಬಂಧಿಸಿದ ಪ್ರಕರಣಗಳು, ಜೀವನಾಂಶ ಪ್ರಕರಣಗಳಲ್ಲಿ ಬರುವ ಅಪ್ರಾಪ್ತ ಮಕ್ಕಳನ್ನು ನೋಡಿಕೊಳ್ಳದೆ ಇರುವುದು, ಹೆಂಡತಿ ಮತ್ತು ತಂದೆ ತಾಯಿನ್ನು ನೋಡಿಕೊಳ್ಳದಿದ್ದಾಗ ಯಾವ ರೀತಿ ಕಾನೂನು ನೆರವು ಪಡೆಯಬೇಕು ಎಂಬುವುದರ ಬಗ್ಗೆ ಎಲ್ಲರು ತಿಳಿದುಕೊಂಡಿರಬೇಕು ಎಂದರು.

ಕಾನೂನು ಮೂಲಕ ಜನರ ಕಷ್ಟಗಳನ್ನು, ಸಮಸ್ಯೆಗಳನ್ನು ಬಗೆಹರಿಸುವುದು ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಉದ್ದೇಶವಾಗಿದ್ದು, ಜನರಿಗೆ ಕಾನೂನು ಅರಿವು ನೆರವು ನೀಡಲಾಗುತ್ತಿದೆ ಎಂದು ಹೇಳಿದರು.

ಕೊಪ್ಪಳ ತಾಲ್ಲೂಕು ಪಾಸ್ಟರ್ಸ್ ಅಸೋಸಿಯೇಷನ ಅಧ್ಯಕ್ಷರಾದ ರೆವೆರೆಂಡ ಜೆ.ರವಿಕುಮಾರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಸರಸ್ವತಿದೇವಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಭಾಗ್ಯಲಕ್ಷ್ಮೀ, ಹಿರಿಯ ವಕೀಲರಾದ ಶ್ಯಾಮಸುಂದರ ಹುಣಸಿಮರದ ಅವರು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಕಲ್ವಾರಿ ಚಾಪಲ ಟ್ರಸ್ಟ್ ಮುಖ್ಯಸ್ಥರಾದ ರೆವೆರೆಂಡ ನವನೀತ ಕುಮಾರ, ಕ್ರಿಸ್ತ ಜ್ಯೋತಿ ಇ ಸಿ ಐ ಚರ್ಚ್‌ನ ಕಾರ್ಯದರ್ಶಿ ಶಾಂತರಾಜ್ ಎಮ್ ಮುರ್ತೋಟಿ ಹಾಗೂ ಚರ್ಚ್‌ನ ಸಿಬ್ಬಂದಿಗಳು ಹಾಗೂ ಮಹಿಳೆಯರು ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕ್ರಿಸ್ಮಸ್ ಮತ್ತು ಹೊಸ ವರ್ಷಕ್ಕಾಗಿ ದಿಂಡಿಗಲ್ ತಲಪ್ಪಾಕಟ್ಟಿ ಬಿರಿಯಾನಿಯಿಂದ ಬೆಂಗಳೂರು ಚೆನ್ನೈ ನಡುವೆ 1500 ಕಿಲೋಮೀಟರ್ ಅಭಿಯಾನ

# ಲೆಜೆಂಡರಿ ಎಕ್ಸ್ ಪ್ರೆಸ್ ಮೂಲಕ "ಬಕೆಟ್ ಆಫ್ ಸೆಲೆಬ್ರೇಷನ್" ಸಂಭ್ರಮಾಚರಣೆಗೆ ಚಾಲನೆ

**ಬೆಂಗಳೂರು:** ಕ್ರಿಸ್ಮಸ್ ಮತ್ತು ಹೊಸ ವರ್ಷದ ಹಿನ್ನೆಲೆಯಲ್ಲಿ ದಿಂಡಿಗಲ್ ತಲಪ್ಪಾಕಟ್ಟಿ ಬಿರಿಯಾನಿಯಿಂದ ಬೆಂಗಳೂರು ಚೆನ್ನೈ ನಡುವೆ 1500 ಕಿಲೋಮೀಟರ್ ಅಭಿಯಾನವನ್ನು ಲೆಜೆಂಡರಿ ಎಕ್ಸ್ ಪ್ರೆಸ್ ಮೂಲಕ ಬಕೆಟ್ ಆಫ್ ಸೆಲೆಬ್ರೇಷನ್" ಸಂಭ್ರಮಾಚರಣೆಗೆ ಚಾಲನೆ ನೀಡಲಾಗಿದೆ.

ದಿಂಡಿಗಲ್ ತಲಪ್ಪಾಕಟ್ಟಿ, ಅಧಿಕೃತ ಬಿರಿಯಾನಿಗೆ ಅಪ್ರತಿಮ ಹೆಸರಾಗಿದ್ದು, "ಬೆಕೆಟ್ ತುಂಬಾ ಸಂಭ್ರಮ" ಎಂಬ ಹೊಸ ಅಭಿಯಾನದೊಂದಿಗೆ ಹಬ್ಬದ ಮೆರಗು ಮೂಡಿಸಲು ಕಾರ್ಯೋನ್ಮುಖವಾಗಿದೆ. ಈ ಉತ್ತೇಜಕ ಉಪಕ್ರಮದ ಭಾಗವಾಗಿ ವಿಶೇಷ ಕೊಡುಗೆಯನ್ನು ಆನಂದಿಸಬಹುದಾಗಿದ್ದು, ಖರೀದಿಸಿದ ಪ್ರತಿ ಬಕೆಟ್ ಬಿರಿಯಾನಿಯೊಂದಿಗೆ, ಗ್ರಾಹಕರು ಪೂರಕ ಆರಂಭಿಕ ಪಾನೀಯಗಳು ಮತ್ತು ಸಿಹಿತಿಂಡಿಗಳನ್ನು ಉಡುಗೊರೆಯಾಗಿ ಪಡೆಯಲಿದ್ದಾರೆ.




ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ದಿಂಡಿಗಲ್ ತಲಪ್ಪಾಕಟ್ಟಿ ವ್ಯವಸ್ಥಾಪಕ ನಿರ್ದೇಶಕ ನಾಗಸ್ವಾಮಿ ಧನಬಾಲನ್ ಮತ್ತು ವ್ಯಾಪಾರ ವಿಭಾಗದ ಮುಖ್ಯಸ್ಥ ಎ. ಸೆಂಥಿಲ್ ಕುಮಾರ್, ಇದೊಂದು ವಿನೂತನ ಮತ್ತು ವಿಭಿನ್ನ ಅಭಿಯಾನವಾಗಿದೆ. ವಿಶೇಷವಾಗಿ ವಿನ್ಯಾಸಗೊಳಿಸಿದ ಟ್ಯಾಬ್ಲೋದಲ್ಲಿ ಬಿರಿಯಾನಿ ಬಕೆಟ್ ಅನ್ನು ಒಳಗೊಂಡಿದೆ. ಈ ವಿಶಿಷ್ಟ ವಾಹನವು 1500ಕ್ಕೂ ಅಧಿಕ ಕಿಲೋಮೀಟರ್‌ಗಳ ಅಸಾಮಾನ್ಯ ಪ್ರಯಾಣವನ್ನು ಪ್ರಾರಂಭಿಸಿದ್ದು, ಚೆನ್ನೈನಲ್ಲಿ ಮುಕ್ತಾಯಗೊಳ್ಳುತ್ತದೆ, ಆಹಾರ ಪ್ರಿಯರೊಂದಿಗೆ ತೊಡಗಿಸಿಕೊಳ್ಳಲು ಮತ್ತು ಹಬ್ಬದ ಋತುವನ್ನು ಆಚರಿಸಲು ಪ್ರಮುಖ ನಗರಗಳಲ್ಲಿ ಈ ವಾಹನ ನಿಲುಗಡೆ ಮಾಡಲಿದೆ ಎಂದರು.

ಇದೊಂದು ರೀತಿಯಲ್ಲಿ ರೋಡ್‌ಶೋನಂತಿದ್ದು, ಲೆಜೆಂಡರಿ ಎಕ್ಸ್‌ಪ್ರೆಸ್ ಕೇವಲ ಒಂದು ಚಮತ್ಕಾರವಲ್ಲ. ಆದರೆ ಸಂವಾದಾತ್ಮಕ ಅನುಭವವಾಗಿದೆ, ಬ್ರ್ಯಾಂಡ್ ಅನ್ನು ಅದರ ನಿಷ್ಠಾವಂತ ಗ್ರಾಹಕರೊಂದಿಗೆ ಮೋಜು ಮತ್ತು ಸ್ಮರಣೀಯ ರೀತಿಯಲ್ಲಿ ಸಂಪರ್ಕಿಸುತ್ತದೆ. ಸೆಲ್ಫಿ ಕ್ಲಿಕ್ ಮಾಡಿ #LegendaryExpres and #BucketOfCelebration ನೊಂದಿಗೆ ಸಾಮಾಜಿಕ ಮಾಧ್ಯಮದಲ್ಲಿ ಅದನ್ನು ಅಪ್‌ಲೋಡ್ ಮಾಡಬೇಕು. 24 ಗಂಟೆಗಳ ಒಳಗೆ 50 ಮಂದಿ ಲೈಕ್ ಮಾಡಿದರೆ ವಿಜೇತರು ಉಚಿತ ಬಿರಿಯಾನಿ ಆನಂದಿಸಲು ಅವಕಾಶ ಪಡೆಯಲಿದ್ದಾರೆ. ಈ ಅಭಿಯಾನ ಹಬ್ಬದ ಋತುವನ್ನು ಇನ್ನಷ್ಟು ವಿಶೇಷವಾಗಿಸಲಿದೆ ಎಂದರು.

'ಬಕೆಟ್ ಆಫ್ ಸೆಲೆಬ್ರೇಷನ್' ಅಭಿಯಾನ ಮತ್ತು ಲೆಜೆಂಡರಿ ಎಕ್ಸ್‌ಪ್ರೆಸ್ ನಮ್ಮ ಗ್ರಾಹಕರಿಗೆ ಮರೆಯಲಾಗದ ಹಬ್ಬದ ನೆನಪುಗಳನ್ನು ಸೃಷ್ಟಿಸುವ ಗುರಿ ಹೊಂದಿದೆ. ಇದು ಉತ್ತಮ ಆಹಾರದ ಬಗ್ಗೆ ಮಾತ್ರವಲ್ಲ; ಇದು ಋತುವಿನ ಸಂತೋಷವನ್ನು ಹಂಚಿಕೊಳ್ಳಲು ಜನರನ್ನು ಒಟ್ಟಿಗೆ ತರಲಿದೆ. ಲೆಜೆಂಡರಿ ಎಕ್ಸ್‌ಪ್ರೆಸ್ ಪ್ರಮುಖ ನಗರಗಳನ್ನು ಹಾದು ಹೋಗುತ್ತದೆ. ಹೊಸ ವರ್ಷವನ್ನು ಭವ್ಯವಾದ ಆಚರಣೆಯೊಂದಿಗೆ ಸ್ವಾಗತಿಸುವ ಸಮಯಕ್ಕೆ ಚೆನ್ನೈ ತಲುಪುತ್ತದೆ ಎಂದರು.

ದಿಂಡಿಗಲ್ ತಲಪ್ಪಾಕಟ್ಟಿ 1957 ರಲ್ಲಿ ಸ್ಥಾಪನೆಯಾಗಿದ್ದು, ಅಧಿಕೃತ ಬಿರಿಯಾನಿಗೆ ಮತ್ತೊಂದು ಹೆಸರಾಗಿದೆ. ಸಿಗ್ನೇಚರ್ ಮಸಾಲೆಗಳು ಮತ್ತು ಪ್ರೀಮಿಯಂ ಪದಾರ್ಥಗಳೊಂದಿಗೆ ರಚಿಸಲಾಗಿದೆ. ಶ್ರೀಮಂತ ಪರಂಪರೆಯನ್ನು ಹೊಂದಿರುವ ಬ್ರ್ಯಾಂಡ್ ಇದಾಗಿದೆ. ಇದು ತನ್ನ ಸಾಟಿಯಿಲ್ಲದ ಪರಿಮಳ ಮತ್ತು ಅನನ್ಯ ಭೋಜನದ ಅನುಭವಗಳೊಂದಿಗೆ ಗ್ರಾಹಕರನ್ನು ಸಂತೋಷಪಡಿಸಲಿದೆ ಎಂದು ಹೇಳಿದರು.

# ಸಖಿ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಮಹಿಳಾ ಅರ್ಜಿ ಅಭ್ಯರ್ಥಿಗಳಿಂದ ಆಹ್ವಾನ

**ಕೊಪ್ಪಳ :** ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೊಲೀಸ್ ಸೇವೆ, ಕಾನೂನು ಸೇವೆ, ಸಮಾಲೋಚನೆ ಮತ್ತು ತಾತ್ಕಾಲಿಕ ವಸತಿ ಒದಗಿಸುವ ಉದ್ದೇಶ ಹೊಂದಿರುವ "ಸಖಿ" (ಒನ್ ಸ್ಟಾಪ್ ಸೆಂಟರ್) ಕೇಂದ್ರ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಲು ಒಂದು ಕೇಸ್ ವರ್ಕರ್/ಸೋಶಿಯಲ್ ವರ್ಕರ್ ಹಾಗೂ ಒಂದು ಪ್ಯಾರಾಲೀಗಲ್ ಪರ್ಸನಲ್ ಲಾಯರ್ ಹುದ್ದೆಗಳನ್ನು ಮಾಸಿಕ ಗೌರವಧನವನ್ನಾಧರಿಸಿ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹ ವಿದ್ಯಾರ್ಹತೆ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕೇಸ್ ವರ್ಕರ್/ಸೋಶಿಯಲ್ ವರ್ಕರ್ ಹುದ್ದೆಗೆ ಬಿ.ಎಸ್.ಡಬ್ಲ್ಯೂ, ಬಿಎ (ಸಮಾಜಶಾಸ್ತ್ರ) ಅಥವಾ ಮಹಿಳಾ ಅಧ್ಯಯನದಲ್ಲಿ ಪದವಿ (02 ವರ್ಷಗಳ ಅನುಭವದೊಂದಿಗೆ) ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ಪ್ಯಾರಾಲೀಗಲ್ ಪರ್ಸನಲ್ ಲಾಯರ್ ಹುದ್ದೆಗೆ ಕಾನೂನು ಪದವಿಯೊಂದಿಗೆ 2 ರಿಂದ 3 ವರ್ಷಗಳ ಅನುಭವ ಹೊಂದಿರಬೇಕು.

ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರಬೇಕು. ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಅರ್ಜಿ ಸಲ್ಲಿಸಬಯಸಿದ್ದಲ್ಲಿ ಪ್ರತ್ಯೇಕವಾಗಿ ಹುದ್ದೆವಾರು ಅರ್ಜಿ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಯವರು ಸಖಿ (ಒನ್ ಸ್ಟಾಪ್ ಸೆಂಟರ್) ಮಾರ್ಗಸೂಚಿಗಳನ್ವಯ 24*7 (ಶಿಫ್ಟ್ ಡ್ಯೂಟೀಸ್) ಕಾರ್ಯನಿರ್ವಹಿಸಲು ಸಿದ್ಧರಿರಬೇಕು. ಈ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿದ್ದು, 11 ತಿಂಗಳಿಗೆ ಗೌರವಧನ ಸೇವೆ ಆಗಿರುತ್ತದೆ. ತಮ್ಮ ಸೇವೆಯು ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ ಯಾವುದೇ ಮುಚ್ಚಳಿಕೆ ಅಥವಾ ನೋಟೀಸ್ ನೀಡದೇ ತೆಗೆದು ಹಾಕುವ ಅಧಿಕಾರವು ಜಿಲ್ಲಾಧಿಕಾರಿಗಳಿಗೆ ಇರುತ್ತದೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ ಸಮಿತಿಯನಿರ್ಣಯವೇ ಅಂತಿಮವಾಗಿರುತ್ತದೆ. ಅಭ್ಯರ್ಥಿಯ ಆಯ್ಕೆಯನ್ನು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಮೆರಿಟ್, ಅನುಭವ ಆಧಾರ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯು ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯ ಅನುಮೋದನೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಕಾಲಕಾಲಕ್ಕೆ ನೀಡುವ ಸೂಚನೆಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಅಭ್ಯರ್ಥಿಗಳು ಇಂಗ್ಲೀಷ್ ಮತ್ತು ಕನ್ನಡ ಕಂಪ್ಯೂಟರ್ ಜ್ಞಾನದಲ್ಲಿ ಪರಿಣಿತಿ ಹೊಂದಿರಬೇಕು.

ಅಗತ್ಯವಿದ್ದಲ್ಲಿ ಕಂಪ್ಯೂಟರ್ ಜ್ಞಾನ ಪರೀಕ್ಷೆಯನ್ನು ನಡೆಸಲಾಗುವುದು. ಈ ಕ್ಷೇತ್ರದಲ್ಲಿ ಅನುಭವ ಹೊಂದಿದವರಿಗೆ ಪ್ರಾಮುಖ್ಯತೆ ನೀಡಲಾಗುವುದು. ಸಖಿ (ಒನ್ ಸ್ಟಾಪ್ ಸೆಂಟರ್) ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕನ್ನಡ ಇಂಗ್ಲೀಷ್ ಹಿಂದಿ ಭಾಷೆಗಳಲ್ಲಿ ಓದಲು ಬರೆಯಲು ಮತ್ತು ಮಾತನಾಡಲು ನಿಪುಣರಾಗಿರಬೇಕು. ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಯು ಕಡ್ಡಾಯವಾಗಿ ಕೊಪ್ಪಳ ಜಿಲ್ಲೆಯ ನಿವಾಸಿಯಾಗಿರಬೇಕು. ಅಭ್ಯರ್ಥಿ ಹುದ್ದೆಗೆ ಅನುಗುಣವಾಗಿ ಅಂಗೀಕೃತ ಕಾಲೇಜು ಅಥವಾ ವಿಶ್ವ ವಿದ್ಯಾಲಯಗಳಿಂದ ಶಿಕ್ಷಣ ಪಡೆದಿರಬೇಕು. ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗೌರವಧನ ಹೊರತುಪಡಿಸಿ ಯಾವುದೇ ಭತ್ಯೆ ನೀಡಲಾಗುವುದಿಲ್ಲ. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಲಭ್ಯತೆಯ ಮೇಲೆ ಗೌರವಧನ ನೀಡಲಾಗುವುದು. ಈ ಹುದ್ದೆಗಳು ತಾತ್ಕಾಲಿಕವಾಗಿರುವುದರಿಂದ ಯಾವುದೇ ಮೀಸಲಾತಿಗಳು ಅನ್ವಯಿಸುವುದಿಲ್ಲ. ಅರ್ಹ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ವಿವರವನ್ನೊಳಗೊಂಡ ಅರ್ಜಿ ನಮೂನೆ, ಎಸ್.ಎಸ್.ಎಲ್.ಸಿ ಅಂಕ ಪಟ್ಟಿ, ಹುದ್ದೆಗೆ ನಿಗದಿಪಡಿಸಿದ ಹಾಗೂ ವಿದ್ಯಾರ್ಹತೆಯ ಅಂಕಪಟ್ಟಿಗಳು, ಅನುಭವ ಪ್ರಮಾಣ ಪತ್ರಗಳು, ಕನಿಷ್ಠ 06 ತಿಂಗಳು ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ, ಕಡ್ಡಾಯವಾಗಿ ತಹಶೀಲ್ದಾರರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಲಗತ್ತಿಸಬೇಕು. ಈ ಎಲ್ಲಾ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ದೃಢಿಕರಿಸಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಅರ್ಹ ವಿದ್ಯಾರ್ಹತೆ ಹೊಂದಿರುವ ಸರ್ಕಾರ ನಿಗದಿಪಡಿಸಿರುವ ವಯೋಮಿತಿಯೊಳಗಿನ ಮಹಿಳಾ ಅಭ್ಯರ್ಥಿಗಳು ಅರ್ಜಿಗಳನ್ನು 2025ರ ಜನವರಿ 9 ರೊಳಗೆ ಸಾಯಂಕಾಲ 5.30 ಗಂಟೆಯೊಳಗಾಗಿ ಪಡೆದುಕೊಂಡು, ಅಗತ್ಯ ಎಲ್ಲಾ ದಾಖಲಾತಿಗಳೊಂದಿಗೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ ರವರ ಕಾರ್ಯಾಲಯದಲ್ಲಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಕೆಲಸ ಅವಧಿಯೊಗೆ ಬಂದು ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂಡಲಗಿ: ಅಜ್ಜ-ಅಜ್ಜಿಯರ ದಿನಾಚರಣೆ

**ಮೂಡಲಗಿ :** ಸಮಾಜ ಬೆಳೆದಂತೆ ಕುಟುಂಬದಲ್ಲಿಯ ಮಕ್ಕಳ ಮೇಲಿನ ಪ್ರೀತಿ ಕಡಿಮೆಯಾಗಿ ಆಧುನಿಕ ಜೀವನ ಮಕ್ಕಳ ಬದುಕನ್ನು ಮತ್ತು ಅವರ ಬಾಲ್ಯವನ್ನು ಹಾಳು ಮಾಡುತ್ತಿದೆ. ಅಜ್ಜ-ಅಜ್ಜಿಯರು ಮಕ್ಕಳ ನಿಜವಾದ ಗುರುಗಳು, ಮಾರ್ಗದರ್ಶಕರು ಆಗಿರುತ್ತಾರೆ. ಮಕ್ಕಳ ಬದುಕನ್ನು ರೂಪಿಸುವಲ್ಲಿ ಅವಿಭಕ್ತ ಕುಟುಂಬಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದು ಬೀಳಗಿಯ ಜನಪದ ಸಾಹಿತಿ ಸಿದ್ದಪ್ಪ ಬಿದರಿ ಹೇಳಿದರು.



ಪಟ್ಟಣದ ಆರ್.ಡಿ.ಎಸ್. ಸಿ.ಬಿ.ಎಸ್.ಇ. ಶಾಲೆಯಲ್ಲಿ ಹಮ್ಮಿಕೊಂಡಿರುವ "ಗ್ರ್ಯಾಂಡ್ ಪೇರೆಂಟ್ಸ ಡೇ" ಕಾರ್ಯಕ್ರಮದಲ್ಲಿ ಅತಿಥಿ ಸ್ಥಾನವನ್ನು ವಹಿಸಿಕೊಂಡು ಮಾತನಾಡಿ, ಮಕ್ಕಳ ಬಾಲ್ಯ ಜೀವನದಲ್ಲಿ ಅಜ್ಜ-ಅಜ್ಜಿಯರು ಪರಮಾತ್ಮನ ಸ್ವರೂಪದಂತೆ ಕಾಣುವುದರ ಜೊತೆಗೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸ್ಫೂರ್ತಿಯನ್ನು ತುಂಬುತ್ತಾರೆ. ಅಲ್ಲದೇ ಮಕ್ಕಳು ತಮ್ಮ ಬಾಲ್ಯವನ್ನು ಅಜ್ಜ-ಅಜ್ಜಿಯರ ಜೊತೆಗೆ ಕಳೆದಾಗ ಅವರ ಅನುಭವ ಮಕ್ಕಳ ಮೇಲಾಗಿ ಸ್ವಾಭಿಮಾನ ಮತ್ತು ಸೃಜನಶೀಲ ಸಮಾಜಮುಖಿ ವ್ಯಕ್ತಿತ್ವ ಬೆಳೆಯುವಲ್ಲಿ ಸಹಾಯಕವಾಗುತ್ತದೆ ಎಂದರು.

ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಸಂತೋಷ ಪಾರ್ಶಿ ವಹಿಸಿಕೊಂಡು ಮಾತನಾಡಿ ಮಕ್ಕಳ ಬದುಕಿನಲ್ಲಿ ತಂದೆ ತಾಯಿಗಳ ಪ್ರೀತಿಯ ಜೊತೆಗೆ ಅಜ್ಜ-ಅಜ್ಜಿಯರ ಪ್ರೀತಿ ದೊರೆತಾಗ ಅವರ ಜೀವನ ಸಾಮಾಜಿಕ ಪರಿಜ್ಞಾನದ ಮೇಲೆ ಬೆಳೆಯುವುದು.

ಮಕ್ಕಳಿಗೆ ಮೊಬೈಲ್ ವ್ಯಾಮೋಹ ಬಿಟ್ಟು ಅಜ್ಜ-ಅಜ್ಜಿಯರ ಜೊತೆಗೆ ಬೆರೆಯಲು ತಂದೆ ತಾಯಿಗಳು ಮಕ್ಕಳಿಗೆ ಕಿವಿ ಮಾತು ಹೇಳಬೇಕೆಂದರು.

ಸಮಾರಂಭದಲ್ಲಿ ಕಸ್ತೂರಿ ಪಾರ್ಶಿ, ಪೂಜಾ ಪಾರ್ಶಿ, ಇಂದಿರಾ ಸಾತನೂರು, ರಮೇಶ ಪಾಟೀಲ, ಹಣಮಂತ ದೇಸಾಯಿ, ಬಾಳಾಗೌಡ ಪಾಟೀಲ, ಬಾಬಾಸಾಹೇಬ ನಾಯಿಕ, ಕೃಷ್ಣಪ್ಪಾ ಪಾಟೀಲ, ಯಲ್ಲಪ್ಪ ಕಪ್ಪಲಗುದ್ದಿ, ಡಾ. ಕೆ. ಎಚ್. ನಾಗರಾಳೆ, ಶ್ರೀಕಾಂತ ಕೌಜಲಗಿ, ಸುರೇಶ ಡಬ್ಬನ್ನವರ ಹಾಗೂ ಶಾಲಾ ಸಿಬ್ಬಂದಿಯವರು ಹಾಜರಿದ್ದರು.

ಶಾಲಾ ಮಕ್ಕಳಿಂದ ತಮ್ಮ ಅಜ್ಜ-ಅಜ್ಜಿಯರಿಗೆ ಆರುತಿ ಬೆಳಗಿ ಅವರ ಆಶೀರ್ವಾದ ಪಡೆದುಕೊಂಡರು. ಅಜ್ಜ-ಅಜ್ಜಿಯರನ್ನು ಒಳಗೊಂಡ ಸಾಂಸ್ಕೃತಿಕ ಚಟುವಟಿಕೆಗಳು ಜರುಗಿ ಅಜ್ಜ-ಅಜ್ಜಿಯರು ತಮ್ಮ ಮೊಮ್ಮಕ್ಕಳೊಂದಿಗೆ ಬೆರೆತುಕೊಂಡಿದ್ದು ಕೆಲವು ಅಜ್ಜಿಯಂದಿರು ಮೊಮ್ಮಕ್ಕಳಿಗೆ ಜೋಗುಳ ಹಾಗೂ ಗ್ರಾಮೀಣ ಸೊಗಡಿನ ಹಾಡುಗಳನ್ನು ಹಾಡಿ ರಂಜಿಸುವುದು ವಿಶೇಷವಾಗಿತ್ತು.

ಶಾಲೆಯ ಪ್ರಾಚಾರ್ಯ ಜೋಶಫ್ ಬೈಲಾ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಸುನಿತಾ ಸುಣಧೋಳಿ, ಸೌಜನ್ಯ ಮೀರಾಶಿ ಸೊಗಸಾಗಿ ನಿರೂಪಿಸಿದರು.

ಶಿಕ್ಷಕ ಮೋಹಿನ್ ಪೀರಜಾದೆ ಕೊನೆಯಲ್ಲಿ ವಂದಿಸಿದರು.

# ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ: ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಕೊಪ್ಪಳ :** ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2024-25 ನೇ ಸಾಲಿಗೆ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಿಗೆ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ವಾವಲಂಬಿ ಸಾರಥಿ ಯೋಜನೆಯಡಿ ಫುಡ್ ಕಾರ್ಟ- ಉದ್ದೇಶಗಳಿಗೆ, ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ಕುರಿಸಾಕಾಣಿಕೆ ಉದ್ದೇಶಗಳಿಗೆ ಸೌಲಭ್ಯ ಪಡೆಯಲು ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಹಾಗೂ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ 1,50,000 ರೂ. ಮತ್ತು ನಗರ ಪ್ರದೇಶದಲ್ಲಿ 3,00,000 ರೂ.ಗಳ ಮಿತಿಯಲ್ಲಿರಬೇಕು. ಸ್ವಾವಲಂಬಿ ಸಾರಥಿ ಯೋಜನೆ ಅರ್ಜಿದಾರರು ಕನಿಷ್ಠ 21 ವರ್ಷಗಳಿಂದ ಗರಿಷ್ಟ 50 ವರ್ಷದೊಳಗಿರಬೇಕು. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು ಮತ್ತು ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.

2023-24 ಮತ್ತು 2024-25ನೇ ಸಾಲಿನಲ್ಲಿ ಈ ಯೋಜನೆಗಳಡಿ ಅರ್ಜಿ ಸಲ್ಲಿಸಿದವರು ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಈಗಾಗಲೆ ಈ ಸಾಲುಗಳಲ್ಲಿ ಈ ಯೋಜನೆಯಡಿ ಅರ್ಜಿ ಸಲ್ಲಿಸಿದವರು ಉದ್ದೇಶ ಬದಲಾವಣೆಗೆ ಇಚ್ಛಿಸಿದಲ್ಲಿ ನೇರವಾಗಿ ನಿಗಮದ ವೆಬ್‌ಸೈಟ್ https//swdcorp.karnataka.gov.in/ ADCL portal ನಲ್ಲಿ ಉದ್ದೇಶ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ವಾಹನಗಳಿಗೆ ಸೌಲಭ್ಯ ಪಡೆಯಲು ಫಲಾಪೇಕ್ಷಿಗಳು ಡ್ರೈವಿಂಗ್ ಲೈಸನ್ಸ ಹೊಂದಿರಬೇಕು. ಫುಡ್ ಕಾರ್ಟ ಉದ್ದೇಶಕ್ಕಾಗಿ ಜಿಲ್ಲಾ ಕೇಂದ್ರ, ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ವ್ಯಾಪಾರ ಮಾಡುವ ಸಲುವಾಗಿ ಮಾತ್ರ ಬ್ಯಾಂಕುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

ಅರ್ಜಿ ಸಲ್ಲಿಸಲು ಡಿಸೆಂಬರ್ 29 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಸೇವಾ ಸಿಂಧು ಪೋರ್ಟಲ್ https:.karnataka.gov.in ನಲ್ಲಿ ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರದಲ್ಲಿ ಆನ್‌ಲೈನ್ ಮುಖಾಂತರ ಸಲ್ಲಿಸಿ ಸದುಪಯೋಗ ಪಡೆದುಕೊಳ್ಳುವಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕೊಪ್ಪಳ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಡಕೋಳ: ಹಳೇವಿದ್ಯಾರ್ಥಿಗಳ ಹೃದಯಸ್ಪರ್ಶಿ ಸ್ನೇಹಮಿಲನ



**ಶಿರಹಟ್ಟಿ :** ತಾಲೂಕಿನ ಕಡಕೋಳದ ಶ್ರೀ ಚನ್ನಪ್ಪ ವೀರಪ್ಪ ಅಂಗಡಿ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಹಳೆಯ ವಿದ್ಯಾರ್ಥಿಗಳ ಸ್ನೇಹಮಿಲನ ಕಾರ್ಯಕ್ರಮ ಹೃದಯಸ್ಪರ್ಶಿಯಾಗಿತ್ತು.

ಶಾಲೆಯಲ್ಲಿ 2002-03ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದ್ದ ಹಳೇ ವಿದ್ಯಾರ್ಥಿಗಳು ಏರ್ಪಡಿಸಿದ್ದ ಗುರುವಂದನ ಕಾರ್ಯಕ್ರಮದಲ್ಲಿ ಸೇರಿದ್ದ ಹಳೆಯ ಸ್ನೇಹಿತರೆಲ್ಲರೂ ತಮ್ಮ ಶಾಲಾ ದಿನಗಳನ್ನು ನೆನಪಿಸಿಕೊಂಡರು. ಬಾಲ್ಯದ ಆಟಗಳನ್ನು ನೆನೆದು ಪುಳಕಿತಗೊಂಡರು.

ಪರಸ್ಪರ ತಮ್ಮ ಸಾಧನೆಗಳನ್ನು ಹೇಳಿಕೊಂಡರು. ತಮ್ಮ ಗುರುಗಳಿಗೆ ಗೌರವ ಪೂರ್ವಕ ಕೃತಜ್ಞತೆಯೊಂದಿಗೆ ಗುರುವಂದನೆ ಸಲ್ಲಿಸಿ ಕೃತಾರ್ಥರಾದರು. ಇದೇ ಸಂದರ್ಭದಲ್ಲಿ ನಡೆದ ಪ್ರೇರಣಾತ್ಮಕ ಕಾರ್ಯಕ್ರಮವು ಇಂದಿನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿತ್ತು. ತಾವು ಗಳಿಸಿದ ಪದವಿ ಹಾಗೂ ತಾವು ಮಾಡುವ ಕೆಲಸದ ಕುರಿತು ಕಿರಿಯರಿಗೆ ವಿಸ್ತಾರವಾಗಿ ಹೇಳಿದರು. ತಾವು ನಡೆದ ಬಂದ ದಾರಿಯನ್ನು ಅದಕ್ಕೆ ತಮ್ಮ ಶಿಕ್ಷಕರು ನೀಡಿದ ಸಂಸ್ಕಾರವನ್ನು ಕೂಡ ಸ್ಮರಿಸಿಕೊಂಡರು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು, ಕಾಲೇಜಿನ ಪ್ರಾಚಾರ್ಯರು, ಶಿಕ್ಷಕರು, ಉಪ ಪ್ರಾಂಶುಪಾಲರು, ಮುಂಡರಗಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಂ. ಫಡ್ನೇಶಿ, ಅಂತೂರ-ಬೆಂತೂರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶಿವಾನಂದ ದೊಡ್ಡಣ್ಣವರ, ನವಲಗುಂದ ತಾಲೂಕು ಶಿರೂರಿನ ಎನ್.ಜಿ. ಬಾಳನಗೌಡರ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಡಾ. ಭಾಗ್ಯಜ್ಯೋತಿ ಕೋಟಿಮಠ, ಶಾಲೆಯ ಭೂದಾನಿಗಳಾದ ಬಾಬಣ್ಣ ಶೆಟ್ರು ಅಂಗಡಿ, ತಿಪ್ಪಣ್ಣ ಕೊಂಚಿಗೇರಿ, ಊರಿನ ಗುರು ಹಿರಿಯರು ಭಾಗವಹಿಸಿದ್ದರು.

# ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮ

**ಕೊಪ್ಪಳ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸ್ನೇಹ ಸಂಸ್ಥೆಗಳ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿನ ಸಾಮೂಹಿಕ ವಿವಾಹ ಆಯೋಜಕರಿಗೆ ಹಾಗೂ ಪೂಜಾರಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆ-2012ರ ಕುರಿತು ಜಾಗೃತಿ ಕಾರ್ಯಕ್ರಮವುಗುರುವಾರದಂದುನಗರದ ಕೃಷಿ ವಿಸ್ತರಣಾ ಕೇಂದ್ರದಲ್ಲಿ ನಡೆಯಿತು.



ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ದರಗದ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಮಕ್ಕಳ ಬಾಲ್ಯವು ಅತ್ಯಮೂಲ್ಯವಾದದ್ದು, ಬಾಲ್ಯವನ್ನು ಮಕ್ಕಳು ಅನುಭವಿಸುವಂತಾಗಬೇಕು, ಅದಕ್ಕೆ ಅವಶ್ಯಕವಾದ ಪೂರಕ ವಾತಾವರಣವನ್ನು ನಿರ್ಮಿಸಲು ನಾವುಗಳೆಲ್ಲರೂ ಕಾರ್ಯನಿರ್ವಹಿಸಬೇಕು. ಸರಕಾರವು ಮಕ್ಕಳರಕ್ಷಣೆ, ಅಪೌಷ್ಠಿಕತೆನಿವಾರಣೆ, ತಾಯಿ ಮತ್ತು ಮಕ್ಕಳ ಮರಣವನ್ನು ತಡೆಗಟ್ಟಲು ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಜಾರಿಗೊಳಿಸಿದೆ. ಕರ್ನಾಟಕ ರಾಜ್ಯವನ್ನು ಬಾಲ್ಯವಿವಾಹ ಮುಕ್ತ ರಾಜ್ಯವನ್ನಾಗಿಸಲು, 2016ರಲ್ಲಿ ತಿದ್ದುಪಡಿಯನ್ನು ತಂದಿದ್ದು, ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ 2018 ಮಾರ್ಚ 3 ರಿಂದ ರಾಜ್ಯದಲ್ಲಿ ಈ ಕಾಯ್ದೆಯು ಜಾರಿಯಲ್ಲಿರುತ್ತದೆ. ಈ ಕಾಯ್ದೆಯಡಿಯಲ್ಲಿ ದೇಶದಲ್ಲಿಯೇ ಪ್ರಪ್ರಥಮವಾಗಿ ಪೊಲೀಸ್ ಅಧಿಕಾರಿಗಳಿಗೆ ಸೂ-ಮೂಟೋ ಅಧಿಕಾರದಡಿಯಲ್ಲಿ ಪ್ರಕರಣವನ್ನು ದಾಖಲಿಸುವ/ದಾಖಲಿಸಿಕೊಳ್ಳುವ ಅಧಿಕಾರವನ್ನು ನೀಡಿರುತ್ತದೆ. ಬಾಲ್ಯವಿವಾಹವನ್ನು ಮಾಡಿದ ಪಾಲಕರಿಗೆ ಇರುವಷ್ಟೇ ಶಿಕ್ಷೆ ಬಾಲ್ಯವಿವಾಹಕ್ಕೆ ಅವಕಾಶವನ್ನು ಕಲ್ಪಿಸಿದವರಿಗೆ, ಭಾಗವಹಿಸಿದವರಿಗೆ ಹಾಗೂ ಪ್ರೋತ್ಸಾಹಿಸಿದವರಿಗೆ ಕನಿಷ್ಠ 1 ವರ್ಷದಿಂದ 2 ವರ್ಷ ಜೈಲು ಶಿಕ್ಷೆ ಮತ್ತು ರೂ. 1 ಲಕ್ಷ ದಂಡವನ್ನು ವಿಧಿಸಬಹುದಾಗಿದೆ. ಬಾಲ್ಯವಿವಾಹವನ್ನು ತಡೆಗಟ್ಟುವಲ್ಲಿ ಯಾವುದೇ ವ್ಯಕ್ತಿಗಳಿಂದ ಪ್ರಭಾವ ಬಂದಲ್ಲಿ ನ್ಯಾಯಾಲಯದಿಂದ "ತಡೆಯಾಜ್ಞೆ"ಯನ್ನು ಪಡೆದು ಬಾಲ್ಯವಿವಾಹಗಳನ್ನು ತಡೆಗಟ್ಟಬಹುದಾಗಿದೆ, ಜಿಲ್ಲೆಯಲ್ಲಿ ಈಗಾಗಲೇ ಸುಮಾರು "ತಡೆಯಾಜ್ಞೆ"ಗಳನ್ನು ನ್ಯಾಯಾಲಯಗಳು ಹೊರಡಿಸಿವೆಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಮಾತನಾಡಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಜಿಲ್ಲೆಯಲ್ಲಿ "ಬಾಲ್ಯವಿವಾಹನಿಷೇಧಕಾಯ್ದೆ-2006"ನ್ನು ಪರಿಣಾಮಕಾರಿಯಾಗಿ ಜಾರಿಗೊಳಸಿದೆ. ಬಾಲ್ಯವಿವಾಹವನ್ನು ಮಾಡಿದ ಪಾಲಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿರುವುದರ ಜೊತೆಗೆ ಸಾಮೂಹಿಕ ವಿವಾಹದಲ್ಲಿ ಬಾಲ್ಯವಿವಾಹವನ್ನು ಮಾಡಿದ ದೇವಸ್ಥಾನದ ಸಮಿತಿಯ ವಿರುದ್ಧ ಹಾಗೂ ಕಲ್ಯಾಣ ಮಂಟಪದಲ್ಲಿ ಬಾಲ್ಯವಿವಾಹಕ್ಕೆ ಅವಕಾಶವನ್ನು ನೀಡಿದ ಕಲ್ಯಾಣ ಮಂಟಪದ ವ್ಯವಸ್ಥಾಪಕರ ವಿರುದ್ಧವು ಪ್ರಕರಣವನ್ನು ದಾಖಲಿಸಲಾಗಿದೆ ಎಂದು ತಿಳಿಸಿದರು. ನಿಮ್ಮ ಸಮಿತಿಗಳಿಂದ ಆಯೋಜಿಸುವ ಸಾಮೂಹಿಕ ವಿವಾಹದಲ್ಲಿ ಬಾಲ್ಯವಿವಾಹಕ್ಕೆ ಅವಕಾಶವನ್ನು ನೀಡಬಾರದು ತಪ್ಪಿದಲ್ಲಿ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಬಾಲ್ಯವಿವಾಹವನ್ನು ಮಾಡಲು ಸಹಕರಿಸಿದವರು ಮತ್ತು ಪ್ರೋತ್ಸಾಹಿಸಿದವರು ಸೇರಿದಂತೆ ಪಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಸಾಮೂಹಿಕ ವಿವಾಹ ಆಯೋಜಕರಿಗೆ ಹಾಗೂ ಪೂಜಾರಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ನೇಹ ಸಂಸ್ಥೆಯ ಸಂಯೋಜಕ ರಾಮಾಂಜನೇಯ, ಹನುಮಂತರಾವ್, ಶಿವಲೀಲಾ ವನ್ನೂರು ಸೇರಿದಂತೆ ಸ್ನೇಹ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂಧಿಗಳು, ಕೊಪ್ಪಳ ಮತ್ತು ಯಲಬುರ್ಗಾ ತಾಲೂಕಿನ ದೇವಸ್ಥಾನಗಳ ಪೂಜಾರಿಗಳು ಭಾಗವಹಿಸಿದ್ದರು.

# ಎಸ್.ಸಿ.ಎಸ್.ಟಿ.ಒಬಿಸಿ ಫಲಾನುಭವಿಗಳ ಘಟಕಗಳಿಗೆ ಸಾಲ ಮಂಜೂರು



**ಮೂಡಲಗಿ :** ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ 375 ಎಸ್. ಸಿ. 189 ಎಸ್.ಟಿ. ಮತ್ತು 2,351 ಒಬಿಸಿ ಫಲಾನುಭವಿಗಳ 5,177 ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲಗಳನ್ನು ಮಂಜೂರು ಮಾಡಲಾಗಿದೆ ಮತ್ತು ಸುಮಾರು 21,852 ನೇರ/ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂದು ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ರಾಜ್ಯ ಸಚಿವ ರವನೀತ್ ಸಿಂಗ್ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಚಳಿಗಾಲ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಹಾರ ಸಂಸ್ಕರಣಾ ಘಟಕಗಳ ಯೋಜನೆಯ ಅನುಷ್ಠಾನದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯನ್ನು ದೇಶದಲ್ಲಿನ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಉನ್ನತೀಕರಣಕ್ಕಾಗಿ ಆರ್ಥಿಕ, ತಾಂತ್ರಿಕ ಮತ್ತು ವಾಣಿಜ್ಯ ಸಹಾಯವನ್ನು ಒದಗಿಸಲು ಜಾರಿಗೊಳಿಸುತ್ತಿದೆ. ಈ ಯೋಜನೆಯು 2020-21 ರಿಂದ 2025-26 ರವರೆಗೆ 10,000 ಕೋಟಿ ರೂ. ಅನುದಾನ ನೀಡಲಾಗಿದೆ.

ದೇಶದಲ್ಲಿ 9,298 ಎಸ್.ಸಿ. 5,201 ಎಸ್.ಟಿ. ಮತ್ತು 56,540 ಒಬಿಸಿ ಫಲಾನುಭವಿಗಳಿಗೆ 1,08,580 ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಾಲಗಳನ್ನು ಮಂಜೂರು ಮಾಡಲಾಗಿದೆ ಮತ್ತು ಸುಮಾರು 3,78,004 ಉದ್ಯೋಗಗಳನ್ನು ಸೃಷ್ಟಿಸಲಾಗಿದೆ ಎಂದರು.

ಆಹಾರ ಸಂಸ್ಕರಣೆ ಮತ್ತು ಸಂರಕ್ಷಣೆ ಸಾಮರ್ಥ್ಯ ಸೃಷ್ಟಿ/ವಿಸ್ತರಣೆ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ 14 ಯೋಜನೆಗಳನ್ನು ಅನುಮೋದಿಸಲಾಗಿದೆ. ಮೆಗಾ ಫುಡ್ ಪಾರ್ಕ್ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ಎರಡು ಯೋಜನೆಗಳನ್ನು ಅನುಮೋದಿಸಲಾಗಿದೆ, ಇದು ಸರಿಸುಮಾರು 5,620 ನೇರ / ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ. 726 ಜಿಲ್ಲೆಗಳಿಗೆ ಒಂದು ಜಿಲ್ಲೆ ಒಂದು ಉತ್ಪನ್ನವನ್ನು ಅನುಮೋದಿಸಿದೆ.

ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕ ಯೋಜನೆಯಡಿ ಯೋಜನಾ ವೆಚ್ಚದ 35 % ದರದಲ್ಲಿ ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ, ಪ್ರತಿ ಯೂನಿಟ್ಗೆ ಗರಿಷ್ಠ 10 ಲಕ್ಷ ರೂ. ಹಣಕಾಸಿನ ಸಹಾಯವನ್ನು ನೀಡಲಾಗುತ್ತದೆ. ಸ್ವಸಹಾಯ ಗುಂಪುಗಳ ಪ್ರತಿ ಸದಸ್ಯರಿಗೆ ರೂ 40,000 ದರದಲ್ಲಿ ಆರಂಭಿಕ ಬಂಡವಾಳ, ಸ್ವಸಹಾಯ ಗುಂಪುಗಳ ಒಕ್ಕೂಟಕ್ಕೆ ಗರಿಷ್ಠ ರೂ 4 ಲಕ್ಷ. ರೂ.ಗೆ ಒಳಪಟ್ಟಿರುತ್ತದೆ. ಎಫ್ಪಿಒಗಳು, ಎಸ್ಎಚ್ಜಿಗಳು, ಸಹಕಾರಿ ಸಂಘಗಳು ಅಥವಾ ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್ ಪ್ರೈಸೆಸ್ಗಳ ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್ಗಾಗಿ 50% ವರೆಗೆ ಅನುದಾನ ನೀಡಲಾಗುತ್ತದೆ ಎಂದು ಸಚಿವರು ಉತ್ತರಿಸಿದ್ದಾರೆಂದು ಸಂಸದ ಈರಣ್ಣ ಕಡಾಡಿ ತಿಳಿಸಿದ್ದಾರೆ.

# ಬ್ರಹ್ಮಾನಂದರು ಸಿದ್ಧಾರೂಢರ ಸಮಕಾಲೀನರಾಗಿದ್ದರು: ಸುತ್ತೂರು ಶ್ರೀಗಳು

**ರಬಕವಿ :** ಶಿವಾನಂದ ಶ್ರೀಗಳು ಹಾಗೂ ಹುಬ್ಬಳ್ಳಿ ಸಿದ್ಧಾರೂಢರ ಕಾಲಘಟ್ಟದಲ್ಲಿ ಮಹಾನ ತಪಸ್ವಿಗಳಾದ ಶ್ರೀ ಗುರುದೇವ ಬ್ರಹ್ಮಾನಂದ ಶ್ರೀಗಳು ಅವರ ಸಮಕಾಲಿನರಾಗಿದ್ದರು ಎಂದು ಸುತ್ತೂರ ಶ್ರೀಮಠದ ಶ್ರೀ ಜಗದ್ಗುರು ಶಿವರಾತ್ರಿ ದೇಶೀಕೇಂದ್ರ ಶ್ರೀಗಳು ಹೇಳಿದರು.



ಸೋಮವಾರ ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮಕ್ಕೆ ಭೆಟ್ಟಿ ನೀಡಿ ಅವರು ಮಾತನಾಡಿದರು. ಒಬ್ಬ ಸಾಮಾನ್ಯ ಮನುಷ್ಯ ಕೂಡಾ ಶಿವನ ಸಾಕ್ಷಾತ್ಕಾರ ಪಡೆದುಕೊಳ್ಳಬೇಕಾದರೆ ಶುದ್ದ ಮನಸ್ಸು, ಕಾಯ ಸರಿ ಇರಬೇಕು.

ಅಂದಾಗ ಮಾತ್ರ ಶಿವನೊಲಿಯುವನು. ಆದರೆ ಇಂದಿನ ಮಾಧ್ಯಮಗಳಲ್ಲಿ ತಾವೆಲ್ಲರೂ ನೋಡುತ್ತಿದ್ದೀರಿ. ನುಡಿದಂತೆ ಯಾರೂ ನಡೆಯುತ್ತಿಲ್ಲ. ಇಂದು ಹೇಳಿದ್ದು ನಾಳೆ ಇಲ್ಲಾ ಎನ್ನುತ್ತಿದ್ದಾರೆ. ನಾಡಿದ್ದು ಹೌದು ಎನ್ನುತ್ತಿದ್ದಾರೆ. ಇಂದಿನವರ ನಿಲುವು, ಮನೋಸ್ಥಿ:ತಿ ಸರಿಯಿಲ್ಲ ಎಂದರು.

ಮನುಷ್ಯ ಕೇವಲ ನೆಮ್ಮದಿಯಿಂದ ಇರಲು ಬಯಸಿದರೆ ಆತನ ಮನಸ್ಸು ಕೂಡಾ ಶುದ್ಧವಾಗಿರಬೇಕು. ಇವೆರಡೂ ಶುದ್ಧವಿದ್ದಾಗ ಮನಸ್ಸು ಹಗುರಾಗಿ ಸಂತೋಷವಾಗಿರಲು ಸಾಧ್ಯ ಎಂದರು. ಡಿಸೆಂಬರ್ 29 ರಿಂದ ಜನೇವರಿ 14 ರವರೆಗೆ ಜರುಗುವ ರಬಕವಿ ಬ್ರಹ್ಮಾನಂದ ಆಶ್ರಮದ ಗುರುಭವನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣ, ಸೋಮವಾರ ಭೆಟ್ಟಿ ನೀಡಿ ನೂರಾರು ಭಕ್ತರಿಗೆ ಆಶೀರ್ವದಿಸಿದರು.

ಶ್ರೀಮಠದ ಮಠಾಧೀಶರಾದ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ಮಠವನ್ನು ಅಚ್ಚುಕಟ್ಟಾಗಿ ಬೆಳೆಸಿದ್ದಾರೆ. ಈ ಮಠ ಉತ್ತರೋತ್ತರವಾಗಿ ಬೆಳೆಯಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಶೇಗುಣಶಿಯ ಶ್ರೀ ಮಹಾಂತ ದೇವರು, ಹೊಸೂರಿನ ಪರಮಾನಂದ ಶ್ರೀಗಳು ಹಾಗೂ ಶ್ರೀ ಗುರುಸಿದ್ಧೇಶ್ವರ ಶ್ರೀಗಳು ಉಪಸ್ಥಿತರಿದ್ದರು. ನಗರದ ಅನೇಕ ಮಹಿಳಾ ಮಂಡಳದವರು, ಹಿರಿಯರು ಭಾಗವಹಿಸಿದ್ದರು.

# ಬನಹಟ್ಟಿ: ಭಕ್ತರೆ ಮಠದ ನಿಜವಾದ ಆಸ್ತಿ

**ಬನಹಟ್ಟಿ :** ಮಠಗಳು ಇಂದಿನ ದಿನಗಳಲ್ಲಿ ಅಧ್ಯಾತ್ಮಿಕ, ಸಾಂಸ್ಕೃತಿಕ ಕೇಂದ್ರಗಳಾಗಿವೆ. ಇಂಥ ಮಠಗಳ ಬೆಳವಣಿಗೆಯಲ್ಲಿ ಭಕ್ತರ ಪಾತ್ರ ಬಹಳಷ್ಟು ಪ್ರಮುಖವಾಗಿದೆ. ಭಕ್ತರು ಮಠಗಳ ನಿಜವಾದ ಆಸ್ತಿ. ಮಠಗಳ ಅಭಿವೃದ್ಧಿಗೆ ಭಕ್ತರ ಸಹಾಯ ಸಹಕಾರ ಮುಖ್ಯವಾಗಿದೆ. ಗುರುವಿನ ಸೇವೆಯಿಂದ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದು ಜಮಖಂಡಿಯ ಮುತ್ತಿನಕಂತಿಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯರು ನುಡಿದರು.



ಅವರು ಸೋಮವಾರ ಇಲ್ಲಿನ ಹಿರೇಮಠದಲ್ಲಿ ಶಾಂತವೀರ ಶಿವಾಚಾರ್ಯರ 34 ನೇ ಚಿರಲಿಂಗಾಂಗ ಸಾಮರಸ್ಯ ದಿನೋತ್ಸವದ ಅಂಗವಾಗಿ ಹಮ್ಮಿಕೊಂಡ ಅಧ್ಯಾತ್ಮಿಕ ಪ್ರವಚನದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.

ಚಟ್ಟರಕಿಯ ವೇದಮೂರ್ತಿ ಶಂಕ್ರಯ್ಯ ಶಾಸ್ತ್ರಿಗಳು ಪ್ರವಚನ ನೀಡುತ್ತ, ಜೀವನದಲ್ಲಿ ತಂದೆ, ತಾಯಿ ಮತ್ತು ಗುರುವಿನ ಋಣ ಬಹಳಷ್ಟು ಮಹತ್ವವಾದುದು. ಪ್ರವಚನ, ಅಧ್ಯಾತ್ಮಿಕ ಚಿಂತನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಜೀವನದಲ್ಲಿ ನೆಮ್ಮದಿಯನ್ನುಪಡೆದುಕೊಳ್ಳಬಹುದಾಗಿದೆ. ಅಧ್ಯಾತ್ಮಿಕ ಚಿಂತನೆಯ ಕಾರ್ಯಕ್ರಮಗಳು ನಿರಂತರವಾಗಿ ನಡೆದರೆ ಜನರಲ್ಲಿ ಉತ್ತಮ ಸಂಸ್ಕಾರ ಬೆಳೆಸಲು ಸಾಧ್ಯ ಎಂದರು.

ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಗುರು ಪುಟ್ಟರಾಜ ಸುಗಮ ಸಂಗೀತ ಬಳಗದವರು ಸಂಗೀತ ಸೇವೆಯನ್ನು ನೀಡಿದರು.

ವೇದಿಕೆಯ ಮೇಲೆ ನಗರದ ಗಣ್ಯರಾದ ವಿರುಪಾಕ್ಷಪ್ಪ ಕೊಕಟನೂರ, ಶ್ರೀಶೈಲ ಬೀಳಗಿ, ದಾನಪ್ಪ ಹುಲಜತ್ತಿ, ಪ್ರವೀಣ ಧಬಾಡಿ, ಮಲ್ಲಿಕಾರ್ಜುನ ತುಂಗಳ, ಶ್ರೀಶೈಲ ಧಬಾಡಿ, ಶ್ರೀಪಾದ ಬಾಣಕಾರ, ರಾಮಣ್ಣ ಭದ್ರನವರ, ಶ್ರೀಶೈಲ ಮಠಪತಿ, ಕಲ್ಲಪ್ಪ ಪತ್ತಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕಲಾದಾಗಿ ಹೂಗಾರ ದತ್ತಿ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ಪಾಂಡಪ್ಪ ಲಕ್ಷ್ಮಣ ಹೂಗಾರ ಅವರ, ಲಿಂ.ತಾಯಿ ಬಾಗವ್ವ ಹಾಗೂ ಲಿಂ.ತಂದೆ ಲಕ್ಷ್ಮಣ ಪಾಂಡಪ್ಪ ಹೂಗಾರ ಅವರ ಸ್ಮರಣಾರ್ಥ ಹಾಗೂ ಪೂಜ್ಯ ಅಜ್ಜಿಯವರಾದ ಲಿಂ.ಯಮನವ್ವ ಪಾಂಡಪ್ಪ ಹೂಗಾರ ಅವರ ಸ್ಮರಣಾರ್ಥ ಜಿಲ್ಲಾ ಮಟ್ಟದ 2024 ರ ಸಾಲಿನ ಕ್ರಿಯಾಶೀಲ ಲೇಖಕ ಪ್ರಶಸ್ತಿ ಮತ್ತು ಕ್ರಿಯಾಶೀಲ ಲೇಖಕಿ ಪ್ರಶಸ್ತಿಗೆ ಜಿಲ್ಲೆಯ ಕ್ರೀಯಾಶೀಲ ಸಾಹಿತಿಗಳು ತಮ್ಮ ಪರಿಚಯ ಪತ್ರದೊಂದಿಗೆ ತಮ್ಮ ಕೃತಿಗಳ ಸಮೇತ ಅರ್ಜಿಯನ್ನು ಆಹ್ವಾನಿಸಲಾಗಿದೆ. ತಮ್ಮ ಅರ್ಜಿಯನ್ನು ದಿನಾಂಕ:10/01/2025 ರೊಳಗಾಗಿ ಶ್ರೀ ಶಿವಾನಂದ ಶೆಲ್ಲಿಕೇರಿ ಕಸಾಪ ಜಿಲ್ಲಾಧ್ಯಕ್ಷರು, ಸಾ:ಗಲಗಲಿ ತಾ:ಬೀಳಗಿ ಪೋನ್-9731095271 ಈ ವಿಳಾಸಕ್ಕೆ ಕಳುಹಿಸಿ ಕೊಡಲು ಕಸಾಪ ಜಿಲ್ಲಾ ಕಾರ್ಯದರ್ಶಿಗಳಾದ ಸಿದ್ಧರಾಮ ಶಿರೋಳ, ಡಾ. ಚಂದ್ರಶೇಖರ ಕಾಳನ್ನವರ ಮತ್ತು ಕೋಶಾಧ್ಯಕ್ಷ ಡಾ.ಸಿ.ಎಂ. ಜೋಶಿ ಅವರು ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

# ರಾಣಿ ಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷೆಯಾಗಿ ಮಧುರಾ ನಾಡಗೌಡ ಆಯ್ಕೆ

**ಬಾಗಲಕೋಟೆ :** ಕಿತ್ತೂರ ರಾಣಿ ಚನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷೆಯಾಗಿ ಮಧುರಾ ಮ. ನಾಡಗೌಡ ಉಪಾಧ್ಯಕ್ಷೆಯಾಗಿ ವಿಜಯಲಕ್ಷ್ಮಿ ತಿ. ಹಲಗಲಿ, ನಿರ್ದೇಶಕರಾಗಿ ರಾಜೇಶ್ವರಿ ಮ. ರೋಕಡೆ, ಸುಮಿತ್ರಾ ವಿ. ನಾಡಗೌಡ, ಸುವರ್ಣಾ ರ. ಹಂಡಗಿ, ಭಾರತಿ ಚ. ಗೋಲಪನ್ನವರ, ಶಾಂತಲಾ ವಿ. ನಾಡಗೌಡ, ಕಾಶಮ್ಮ ವಿ. ಉಪ್ಪಿನ್, ರೇಣುಕಾ ನಾಡಗೌಡ, ಸುಮಾ ಪ. ಮೇಟಿ, ಕವಿತಾ ಅ. ಕೋಟಿ, ಶಕುಂತಲಾ ಯ. ಚಂದಾವರಿ ಆಯ್ಕೆಯಾಗಿದ್ದಾರೆ.



# ಉನ್ನತ ಶಿಕ್ಷಣ ಪ್ರತಿಯೊಬ್ಬರ ಹಕ್ಕು: ಶ್ವೇತಾ ಬೀಡಿಕರ

**ಮುಧೋಳ :** ಗ್ರಾಮೀಣ ಭಾಗದ ಮಕ್ಕಳಿಗೆ ಉನ್ನತ ಶಿಕ್ಷಣ ಗಗನ ಕುಸುಮವಾಗಿದೆ,ಪ್ರತಿಯೊಬ್ಬ ಗ್ರಾಮೀಣ ಪ್ರತಿಭೆಯು ಉನ್ನತ ಶಿಕ್ಷಣವನ್ನು ಪಡೆಯುವಂಥಾಗಬೇಕು. ಪ್ರಾಥಮಿಕ ಹಂತದಿಂದಲೇ ಇಂಗ್ಲೀಷ್ ಭಾಷೆಗೆ ಹೆಚ್ಚು ಹೊತ್ತು ನೀಡಬೇಕು,ಮಕ್ಕಳು ತಮ್ಮ ಮಾತೃಭಾಷೆಯಂತೆ ಆಂಗ್ಲ ಭಾಷೆಯನ್ನು ಪ್ರಾಥಮಿಕ ಶಾಲೆಯಿಂದಲೇ ಕಲಿಯುವಂತಾಗಬೇಕು ಎಂದು ಜಮಖಂಡಿಯ ಉಪಯುಭಾಗಾಧಿಕಾರಿಗಳಾದ ಶ್ವೇತಾ ಬಿಡೀಕರ್ ಅವರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬೀರಸಿದ್ದೇಶ್ವರ ನಗರ ಶಿರೋಳ ಶಾಲೆಗೆ ಸಂದರ್ಶನ ನೀಡಿ ಅಭಿಪ್ರಾಯಪಟ್ಟರು. ಶಾಲೆಯ 4 ಮತ್ತು 5ನೇ ತರಗತಿ ಮಕ್ಕಳಿಗೆ ಗಣಿತ ಲೆಕ್ಕ ಇಂಗ್ಲಿಷ್ ಪದ್ಯಗಳನ್ನು ಓದಿಸಿದರು ಶಾಲೆಯಲ್ಲಿ ಶೇ ನೂರರಷ್ಟು ಹಾಜರಾತಿ ಇರುವುದನ್ನು ಕಂಡು ಮುಖ್ಯ ಗುರುಗಳಾದ ಮಲ್ಲಿಕಾರ್ಜುನ ಅರಬಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.ಮಕ್ಕಳ ಲವಲವಿಕೆ, ಶಿಸ್ತು,ಪ್ರಶ್ನೆಗಳಿಗೆ ಉತ್ತರಿಸುವ ರೀತಿಯನ್ನು ಕಂಡು ಸಂತಸಪಟ್ಟರು. ಶಾಲಾ ಮೈದಾನ ಅಡುಗೆ ಕೇಂದ್ರ ಕುಡಿಯುವ ನೀರು ಶೌಚಾಲಯ ಕಾಂಪೌಂಡ್ ಹೂದೋಟ ಪರಿಶೀಲಿಸಿ ಶಾಲಾ ಪರಿಸರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಧೋಳದ ತಹಶೀಲ್ದಾರರಾದ ಮಹಾದೇವ ಸನ್ನಮೂರಿ, ಮುಖ್ಯೋಪಾಧ್ಯಾಯರಾದಮಲ್ಲಿಕಾರ್ಜುನ ಅರಬಿ, ಜ್ಯೋತಿ ಶೇಡಬಾಳ ಅತಿಥಿ ಶಿಕ್ಷಕ ಬಸವರಾಜ್ ಕಡಪಟ್ಟಿ ಮಹದೇವಿ ಕುಳಲಿ ಉಪಸ್ಥಿತರಿದ್ದರು.




# ಏಡ್ಸ್ ರೋಗಿಗಳಿಗೆ ಧೈರ್ಯ ತುಂಬೋಣ: ಡಾ. ಸವಡಿ



**ಗಂಗಾವತಿ :** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೊಪ್ಪಳ ಹಾಗೂ ಜಿಲ್ಲಾ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೊಪ್ಪಳ ಮತ್ತು ಉಪವಿಭಾಗ ಆಸ್ಪತ್ರೆ ಗಂಗಾವತಿ ಇವರ ಸಂಯೋಗದಲ್ಲಿ ಆಸ್ಪತ್ರೆ ಆವರಣದಲ್ಲಿ ವಿಶ್ವ ಏಡ್ಸ್ ದಿನಾಚರಣೆಗೆ ಚಾಲನೆ ನೀಡಲಾಯಿತು.

ನಂತರ ಮಾತನಾಡಿದ ಉಪವಿಭಾಗ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳಾದ ಡಾ.ಈಶ್ವರ ಶಿ,ಸವಡಿ ಏಡ್ಸ್ ರೋಗಿಗಳಿಗೆ ಧೈರ್ಯ ತುಂಭೋಣ ಈ ಬಗ್ಗೆ ಜಾಗೃತಿ ಮೂಡಿಸೋಣ ಇಂದು ವಿಶ್ವ ಏಡ್ಸ್ ದಿನ. ಹಲವರ ಜೀವ ಬಲಿ ಪಡೆದಿರುವ ಈ ರೋಗದ ವಿರುದ್ಧ ಜಾಗೃತಿ ಮೂಡಿಸಬೇಕಾಗಿರುವುದು ಬಹಳ ಅಗತ್ಯ. ಸೂಕ್ತ ಶಿಕ್ಷಣ ಮತ್ತು ಜಾಗೃತಿಯಿಂದ ಈ ರೋಗದ ವಿರುದ್ಧದ ಹೋರಾಟಕ್ಕೆ ಇನ್ನಷ್ಟು ಬಲ ತರಲು ಸಾಧ್ಯ ಏಡ್ಸ್ ಹೀಗೆಂದ ತಕ್ಷಣ ಎಲ್ಲರೂ ಬೆಚ್ಚಿಬೀಳುತ್ತಾರೆ. ಸುಮಾರು ನಾಲ್ಕು ದಶಕಗಳಿಂದ ಹೆಚ್ಐವಿ/ಏಡ್ಸ್ ಪ್ರಪಂಚದಾದ್ಯಂತ ಗಂಭೀರವಾದ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸಿದೆ. ಇಷ್ಟು ವರ್ಷದಲ್ಲಿ ಸಾಕಷ್ಟು ಮಂದಿ ಈ ಕಾಯಿಲೆಗೆ ಬಲಿಯಾಗಿದ್ದಾರೆ.

ಗಂಗಾವತಿ ತಾಲೂಕಿನಲ್ಲಿರುವ 3 ಸಾವಿರ ಏಡ್ಸ್ ರೋಗಿಗಳು ಇದ್ದಾರೆ,ನಮ್ಮ ಸರ್ಕಾರಿ ಆಸ್ಪತ್ರೆಯಲ್ಲಿ ಈ ತಿಂಗಳಲ್ಲಿ ಐದು ಜನ ಏಡ್ಸ್ ಇದ್ದ ಮಹಿಳೆಯರಿಗೆ ಡಿಲೇವರಿ ಮಾಡಲಾಯಿತು ಹಾಗೂ ಜತೆಗೆ, ಈ ರೋಗ ಮತ್ತು ರೋಗಿಗಳ ಬಗ್ಗೆ ಒಂದಷ್ಟು ತಪ್ಪು ತಿಳುವಳಿಕೆಗಳೂ ಇವೆ. ಇಂತಹ ತಪ್ಪು ತಿಳುವಳಿಕೆಗಳನ್ನು ದೂರ ಮಾಡಿ ಏಡ್ಸ್ ರೋಗಿಗಳಿಗೆ ಧೈರ್ಯ ತುಂಬುವ, ಈ ಹೋರಾಟದಲ್ಲಿ ಅವರಿಗೆ ಬಲವಾಗಿ ನಿಲ್ಲುವುದು ಕೂಡಾ ಎಲ್ಲರ ಜವಾಬ್ದಾರಿ. ಆಗ ಮಾತ್ರ ಏಡ್ಸ್ ವಿರುದ್ಧದ ಹೋರಾಟಕ್ಕೆ ಇನ್ನಷ್ಟು ಬಲ ಬರುವುದರಲ್ಲಿ ಸಂಶಯವೇ ಇಲ್ಲ ಉಪವಿಭಾಗ ಆಸ್ಪತ್ರೆಯಿಂದ ಬ್ಯಾಂಡ್ ಮೇಳ ಕೋಲಾಟ ಕಲಾತಂಡ ಹೆಜ್ಜೆ ಮೇಳದೊಂದಿಗೆ ಬಸವಣ್ಣ ಸರ್ಕಲ್,ಮಲ್ಲಿಕಾರ್ಜುನ ಮಠ ಬಸ್ಸ್ಟ್ಯಾಂಡ ಶ್ರೀ ಕೃಷ್ಣ ದೇವರಾಯ ಸರ್ಕಲ್ ನಲ್ಲಿ ಜಾಥಾ ಮುಕ್ತಾಯಗೊಳ್ಳುವುದು ಎಂದರು.

ಗಂಗಾವತಿ ಡಿವೈಎಸ್ಪಿ ಸಿದ್ದಲಿಂಗಪ್ಪಗೌಡ ಪಾಟೀಲ್ ಮಾತನಾಡಿ ಶಿಕ್ಷಣ ಮತ್ತು ಸೂಕ್ತ ಜಾಗೃತಿಯಿಂದ ಮಾತ್ರ ಏಡ್ಸ್ ಬಗೆಗಿನ ಸಂದೇಹ, ತಪ್ಪು ತಿಳುವಳಿಕೆಯನ್ನು ದೂರ ಮಾಡಲು ಸಾಧ್ಯ. ಜತೆಗೆ, ಈ ಕಾಯಿಲೆಯಿಂದ ಬಳಲುತ್ತಿರುವವರಿಗೆ ಪ್ರೀತಿ ತೋರಿ ಈ ಹೋರಾಟದಲ್ಲಿ ಅವರಿಗೆ ಧೈರ್ಯ ತುಂಬುವ, ಮಾನಸಿಕವಾಗಿ ಕುಗ್ಗದಂತೆ ಮಾಡುವ ಕೆಲಸವನ್ನೂ ಎಲ್ಲರೂ ಮಾಡಬೇಕಾಗಿದೆ. ಇಂತಹ ಜಾಗೃತಿಗೆ ಇದು ಸಕಾಲವಾಗಿದೆ. ಇದೇ ಉದ್ದೇಶದಿಂದ ಡಿಸೆಂಬರ್ 1 ರಂದು ವಿಶ್ವ ಏಡ್ಸ್ ದಿನವನ್ನು ಆಚರಣೆ ಮಾಡಲಾಗುತ್ತದೆ. ಏಡ್ಸ್ನಿಂದ ಬಳಲುತ್ತಿರುವವರು ಎದುರಿಸುತ್ತಿರುವ ಕಳಂಕ, ತಾರತಮ್ಯದ ಭಾವನೆಯನ್ನು ದೂರ ಮಾಡಿ ಒಗ್ಗಟ್ಟಾಗಿ ಏಡ್ಸ್ ಮುಕ್ತ ಸಮಾಜದ ನಿರ್ಮಾಣ ಮಾಡುವ ಸಲುವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ 'ಅಸಮಾನತೆಗಳನ್ನು ದೂರವಾಗಿಸಿ, ಏಡ್ಸ್ ಅನ್ನು ಕೊನೆಗೊಳಿಸಿ' ಘೋಷವಾಕ್ಯದಿಂದ ಏಡ್ಸ್ ದಿನವನ್ನು ಆಚರಣೆ ಮಾಡಲಾಗುತ್ತಿದೆ. ಈ ದಿನದಂದು ಹಂಚಿಕೊಳ್ಳುವ ಸಂದೇಶಗಳು ಇಲ್ಲಿವೆ. ಏಡ್ಸ್ನಿಂದ ಈಗಾಗಲೇ ಸಾಕಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ. ಹೀಗಾಗಿ, ಶಿಕ್ಷಣ ಮತ್ತು ರೋಗದ ಬಗ್ಗೆ ಸಮರ್ಥ ಜಾಗೃತಿಯಿಂದ ನಾವು ಈ ಕಾಯಿಲೆಯನ್ನು ದೂರ ಮಾಡಬಹುದು ಎಂದು ಸಾರ್ವಜನಿಕರಿಗೆ ಇಂತಹ ಜಾಗೃತಿಗೆ ಇದು ಸಕಾಲ. ಏಡ್ಸನ್ನು ಈ ಪ್ರಪಂಚದಿಂದ ದೂರ ಮಾಡಲು ಒಗ್ಗಟ್ಟಾಗಿ ಪ್ರಯತ್ನಿಸೋಣ. ಏಡ್ಸ್ನಿಂದ ಪ್ರೀತಿ ನೀಡೋಣ, ಈ ಕಾಯಿಲೆ ವಿರುದ್ಧದ ಹೋರಾಟಕ್ಕೆ ಬಲ ತುಂಬೋಣ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಮೌಲಾಸಾಬ, ನಗರ ಯೋಜನಾ ಪ್ರಾದಧಿಕಾರ ಅಧ್ಯಕ್ಷ ಸೈಯದ್ ಖಾದ್ರಿ,ಗಂಗಾವತಿ ನಗರ ಪೊಲೀಸ್ ಠಾಣೆ ಪಿಐ ಪ್ರಕಾಶ ಮಾಳಿ,ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಮಲ್ಲಿಕಾರ್ಜುನ ತಟ್ಟಿ, ಹೊನ್ನೂರುಸಾಬ,ಚಂದ್ರಶೇಖರ, ಶರಣಪ್ಪ,ಡಾ. ರವೀಂದ್ರನಾಥ, ಡಾ.ನಂದಕುಮಾರ, ತಾಲೂಕು ವೈದ್ಯಾಧಿಕಾರಿಗಳಾದ ಡಾ. ಗೌರಿ ಶಂಕರ್,ಡಾ. ನಾಗರಾಜ್ ಡಾ. ಮಲ್ಲಿಕಾರ್ಜುನ ನರ್ಸಿಂಗ್ ಹೋಮ್,ಡಾ.ಮೇಧಾ ಡಾ.ಮಲ್ಲನಗೌಡ, ಎ ಎಸ್ ಎನ್ ರಾಜು,ಡಾ. ಸತೀಶ್ ರಾಯ್ಕರ್, ಡಾ.ಬಸವರಾಜ ಅಯ್ಯೋದ್ಯ, ಡಾ.ಸುನೀಲ್ ಅರಳಿ, ಸಾದಿಯ,ಡಾ.ಶರಣ ಬಸವ,ಡಾ.ಅಬಿದಾ ಹುಸೇನ್, ವಿಜಯಗೌಡ, ಗುರುರಾಜ ಉಮಚಗಿ, ಆಶಾ ಕಾರ್ಯಕರ್ತೆ ಸೇರಿದಂತೆ ಇತರರು ಇದ್ದರು.

# ರೈಲು ಹೋರಾಟ ಸಮಿತಿಯ ಪೂರ್ವಭಾವಿ

**ತಾಳಿಕೋಟಿ :** ಆಲಮಟ್ಟಿ- ಯಾದಗಿರಿ ರೈಲು ಮಾರ್ಗದ ರೂಪರೇಷೆಗಳನ್ನು ಚರ್ಚಿಸಲು ಹೋರಾಟ ಸಮಿತಿಯ ಸಭೆಯನ್ನು ಪಟ್ಟಣದ ಎಪಿಎಂಸಿ ಸಭಾಭವನದಲ್ಲಿ ಭಾನುವಾರ ಆಯೋಜಿಸಲಾಗಿತ್ತು.ಸೇರಿದ್ದ ಪ್ರಮುಖರು ತಮ್ಮ ಅನುಭವಹಂಚಿಕೊಂಡರು.



1933ರಲ್ಲಿ ಬ್ರಿಟಿಷ್ ಸರ್ಕಾರದ ಅವಧಿಯಲ್ಲಿ ಆಲಮಟ್ಟಿಯಿಂದ ಹುಲ್ಲೂರ, ಮುದ್ದೇಬಿಹಾಳ, ತಾಳಿಕೋಟೆ, ಹುಣಸಗಿ ಮಾರ್ಗವಾಗಿ ಯಾದಗೀರವರೆಗೆ ರೈಲು ಮಾರ್ಗ ಅಳವಡಿಸುವ ಯೋಜನೆ ರೂಪಿಸಲಾಗಿತ್ತು. ಆದ-'ರೆ ಕಾರಣಾಂತರಗಳಿಂದ ತಡೆಯಾಗಿದ್ದು ಅದನ್ನು ಮುಂದುವರೆಸುವ ಹಲವು ಪ್ರಯತ್ನಗಳನ್ನು ಈ ಭಾಗದ ಜನತೆ ಮಾಡಿದರೂ ಯಶಸ್ಸು ಕಂಡಿಲ್ಲ. ಅಂದಿನಿಂದ ಇಂದಿನವರೆಗೆ ಯೋಜನೆ ಕಾರ್ಯರೂಪಕ್ಕೆ ತರಲು ಹಲವು ಪ್ರಯತ್ನಗಳು ಮನವಿಗಳನ್ನು ನೀಡಲಾಗಿದೆ, ಯಾದಗೀರ ಜಿಲ್ಲೆಯ ಬಹುಭಾಗ ಭತ್ತದ ಕಣಜವಾಗಿ, ತಾಳಿಕೋಟೆ ಮುದ್ದೇಬಿಹಾಳ ಭಾಗ ತೊಗರಿಕಣಜವಾಗಿವೆ.ನೀರಾವರಿಯಿಂದ ಕಬ್ಬು ಹತ್ತಿಯಂತಹ ವಾಣಿಜ್ಯ ಬೆಳೆಗಳು, ತೋಟಗಾರಿಕೆ ಉತ್ಪನ್ನಗಳ ಪ್ರಮಾಣ ಹೆಚ್ಚಿದೆ. ಜೊತೆಗೆ ರೈಲುಪ್ರಯಾಣವು ಪ್ರಯಾಣಿಕರಿಗೆ ವೆಚ್ಚ ತಗ್ಗಿಸಿದರೆ ಇದು ಪರಿಸರಕ್ಕೆ ಆಗುವ ಹಾನಿಯನ್ನು ಹೆಚ್ಚಿನಮಟ್ಟದಲ್ಲಿ ತಪ್ಪಿಸುತ್ತದೆ ಎಂಬೆಲ್ಲ ವಿಷಯಗಳನ್ನು ಪಟ್ಟಿಮಾಡಿಕೊಂಡು ರೈಲುಮಾರ್ಗವನ್ನು ನೀಡಲೇಬೇಕು ಎಂಬ ಒತ್ತಾಯ, ಒತ್ತಡ ಹೆಚ್ಚಿಸಬೇಕು. ಯೋಜನೆ ಕಾರ್ಯರೂಪಕ್ಕೆ ಬರುವವರೆಗೆ ಅಚಲ ಹೋರಾಟ ನಡೆಸಬೇಕು ಎಂದು ತೀರ್ಮಾನಿಸಲಾಯಿತು. ಈ ಹಿಂದೆ ಕಡೆಗಣಿಸಲ್ಪಟ್ಟಿರುವ ಕಾರಣಗಳನ್ನು ಗುರುತಿಸಿ ರೈಲು ಮಾರ್ಗದ ಅವಶ್ಯಕತೆಯನ್ನು ಮನಗಾಣಿಸಬೇಕು. ಇದರಲ್ಲಿ ಜನಪ್ರತಿನಿಧಿಗಳು ಪ್ರಮುಖ ಪಾತ್ರ ವಹಿಸುವಂತೆ ಒತ್ತಾಯ ತರಬೇಕು. ಹೋರಾಟವು ಪಕ್ಷಾತೀತವಾಗಿ, ಜಾತ್ಯತೀತವಾಗಿ ಇರಬೇಕು. ಸಾರ್ವಜನಿಕ ಹಿತಾಸಕ್ತಿಯೇ ಪ್ರಮುಖವಾಗಬೇಕು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು.ಎಷ್ಟೆ ಎಡರು ತೊಡರು ಬಂದರೂ ಲೆಕ್ಕಿಸದೇ ತನುಮನಧನದಿಂದ ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ತೀರ್ಮಾನಿಸಿದರು. ಸಂಸತ್ ಅಧಿವೇಶನ ಇದೇ 20ಕ್ಕೆ ಕೊನೆಗಾಣಲಿದ್ದು ಇದರೊಳಗೆ ಸಮಿತಿಯೊಂದು ಈ ಭಾಗದ ಸಂಸದರು, ಶಾಸಕರನ್ನೊಳಗೊಂಡು ಕೇಂದ್ರ ರೈಲು ಸಚಿವರನ್ನು ಭೇಟಿಯಾಗಬೇಕು. ರಾಜ್ಯ ರೈಲು ಸಚಿವರು ನಮ್ಮವರೇ ಆಗಿದ್ದು ಅದರ ಪ್ರಯೋಜನ ಪಡೆಯಬೇಕು ಎಂದು ಚರ್ಚೆ ನಡೆಯಿತು.

ಮಹಾಂತೇಶ ಮುರಾಳ ಸ್ವಾಗತಿಸಿದರು. ಆರ್.ವಿ.ಜಾಲವಾದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಇವರಲ್ಲದೇ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್. ಎಸ್.ಪಾಟೀಲ ಕೂಚಬಾಳ, ಇಬ್ರಾಹಿಂ ಮನ್ಸೂರ,ಪ್ರಮುಖರಾದ ತಿರುಪತಿ ನವಲೆ, ಶ್ರೀಕಾಂತ ಪತ್ತಾರ, ಪ್ರಸನ್ನ ತಂಬಾಕೆ, ಪ್ರಭುಗೌಡ ಮದರಕಲ್ಲ, ಘನಶ್ಯಾಮ ಚವಾಣ, ಕಾಶಿನಾಥ ಮುರಾಳ, ರಾಜು ಹಂಚಾಟೆ, ಆರ್. ಎಲ್.ಕೊಪ್ಪದ, ಬಸನಗೌಡ ಬಾಗೇವಾಡಿ, ಮೊದಲಾದವರು ಮಾತನಾಡಿದರು.

# ಉದಯ ಕಟ್ಟಡ ನಿರ್ಮಾಣ ಕೂಲಿ ಕಾರ್ಮಿಕರ ಸಂಘದ 9ನೇ ವಾರ್ಷಿಕೋತ್ಸವದ ಅಂಗವಾಗಿ ಹಿರಿಯ ಕಾರ್ಮಿಕರಿಗೆ ಸನ್ಮಾನ



**ಮುಳುಗುಂದ :** ಮುಳಗುಂದ ಪಟ್ಟಣದಲ್ಲಿರುವ ಶಾದಿ ಮಹಲಿನಲ್ಲಿ ಉದಯ ಕಟ್ಟಡ ನಿರ್ಮಾಣ ಕೂಲಿ ಕಾರ್ಮಿಕರ ಸಂಘದ ಒಂಬತ್ತನೇ ವಾರ್ಷಿಕೋತ್ಸವ ಆಚರಣೆಯನ್ನು ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಯುವ ಕಾಂಗ್ರೆಸ್ ಮುಖಂಡರಾದ ಶ್ರೀ ಕೃಷ್ಣೇಗೌಡ ಪಾಟೀಲ್. ಮಾತನಾಡಿ ಎಲ್ಲಾ ಕಾರ್ಮಿಕ ಸದಸ್ಯರು ಉದಯ ಕಟ್ಟಡ ನಿರ್ಮಾಣ ಕೂಲಿ ಕಾರ್ಮಿಕರ ಸಂಘವನ್ನು ಒಂಬತ್ತು ವರ್ಷದಿಂದ ಮುನ್ನಡೆಸುತ್ತಿದ್ದಾರೆನಮಗೆತುಂಬಾಹೆಮ್ಮೆಆಗುತ್ತಿದೆ.ಯಾವ ಲೋಪಗಳಿಲ್ಲದೆ ಇಲ್ಲಿಯವರೆಗೂ ಸಂಘವನ್ನು ನಡೆಸುತ್ತಾ ಬಂದಿದ್ದಾರೆ. ಈ ಸಂಘಕ್ಕೆ ಯಾವತ್ತಿಗೂ ನಮ್ಮ ಬೆಂಬಲ ಇರುತ್ತದೆ.ಹಾಗೆಅರಹಕೂಲಿಕಾರ್ಮಿಕರನ್ನುಆಯ್ಕೆಗೊಂಡು ಇನ್ನೂಹೆಚ್ಚುಹೆಚ್ಚುಈಸಂಘಬೆಳೆಯಲಿಎಂದುಆಶಿಸುತ್ತೇನೆ. ಈ ಕಾರ್ಯಕ್ರಮದಲ್ಲಿ. ಯುವ ಕಾಂಗ್ರೆಸ್ ಮುಖಂಡರಾದ ಶ್ರೀ ಕೃಷ್ಣೇಗೌಡ ಪಾಟೀಲ್. ಶ್ರೀ ಎಂಡಿ ಬಟ್ಟೂರ್. ಶ್ರೀ ಎಸ್ ಸಿ ಚವಡಿ. ಶ್ರೀ ಕೆ ಎಲ್ ಕರಿಗೌಡ. ಶ್ರೀ ಇಮಾಮಸಾಬ ಶೇಖ ಶ್ರೀ. ಶಿವಣ್ಣ ನೀಲಗುಂದ. ಶ್ರೀ. ತಾಜುದ್ದೀನ್ ಕಿಂಡ್ರಿ ಶ್ರೀ ಅಶೋಕ ಸುಂಕಾಪುರ್. ಶ್ರೀ. ಎಸ್ ಸಿ ಬಡ್ನಿ. ಶ್ರೀ. ವಿಜಯ ನೀಲಗುಂದ. ಶ್ರೀ.ಸಯ್ಯದ್ಅಲಿಶೇಖಹಾಗೂಕಾರ್ಮಿಕಸಂಘದಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಮತ್ತು ಕಾರ್ಮಿಕರು ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State